# ನೇಸರು

## ತಿಂಗಳೋಲೆ

## ಮೈಸೂರು ಅಸೋಸಿಯೇಷನ್ ಮುಂಬೈ

**NESARU** TINGALOLE Vol XVI - 9-10 ಸಪ್ಟೆಂಬರ್-ಅಕ್ಟೋಬರ್ 1998

ಈ ಸಂಚಿಕೆಯಲ್ಲಿ

(ಹರಿ)ದಾಸ ಸಾಹಿತ್ಯ 5 • ರಮಾಕೃಷ್ಣ 2

Remembering Mahatma Gandhi 7

ಅಸೋಸಿಯೇಶನ್ನಿನಲ್ಲಿ ಶ್ರೀ ಸ್ವರ್ಣಗೌರಿ ಮತ್ತು
ಶ್ರೀ ಮಹಾಗಣಪತಿಯ ಉತ್ಸವ 8

Nature of Happiness 11

ಸಂದರ್ಶನ :
ಸತ್ಯವತಿ ಪ್ರಸನ್ನ 12

ಸುತ್ತ-ಮುತ್ತ 14

The Mysore Association, Mumbai
393, Bhaudaji Road, Matunga, Mumbai-400 019.
Tel.: 402 46 47 • Grams: "KARUNADU"

# ಹರಿದಾಸ ಸಾಹಿತ್ಯ

(ಭಾಗ -೫)

• ರಮಾಕೃಷ್ಣ

## ಪುರಂದರ ದಾಸರು ಬದುಕಿ ಬಾಳಿದ ಕಾಲ ಭಾಗ

(ಯುಗ ಧರ್ಮಭಾಗ)

ಪುರಂದರದಾಸರು ಬದುಕಿ ಬಾಳಿದ ಕಾಲವನ್ನು ನಮ್ಮ ನಾಡಿನ ಒಂದು ಪರ್ವ ಕಾಲವೆನ್ನಬಹುದು. ನಾಡಿನ ಧಾರ್ಮಿಕ ನಿಲುವು ಸಾಮಾಜಿಕ ವ್ಯವಸ್ಥೆ, ಜನ ಜೀವನದ ರೀತಿ ನೀತಿ ಒಂದು ಘಟ್ಟದಿಂದ ಇನ್ನೊಂದು ಘಟ್ಟ ಮುಟ್ಟಿದ ಕಾಲ. ನಾಡಿನಲ್ಲಿ ಪರ್ಶಿಯನ್ ಮುಸ್ಲಿಮ್ ಸಂಸ್ಕೃತಿಗಳು ಬಂದೊದಗಿದ್ದವು. ಉತ್ತರದಲ್ಲಿ ಮೊಗಲ್ ಸಾಮ್ರಾಜ್ಯ ಸುಭದ್ರವಾಗಿ ವೈದಳೆದಿದ್ದ ಕಾಲ. ಗ್ರಾಮೀಣ ಸಂಸ್ಕೃತಿ ನಗರೀಕರಣವಾಗುತ್ತಿದ್ದ ಕಾಲ. ವರ್ಣಾಶ್ರಮ ಧರ್ಮದ ಕಟ್ಟುಪಾಡುಗಳು ಸಡಿಲಾಗುತ್ತಿದ್ದ ಕಾಲ. ಆರ್ಥಿಕ ಬೆಳವಣಿಗೆಗೆ ಹೊರನಾಡ ಸಂಪರ್ಕ ಹೆಚ್ಚುತ್ತಿದ್ದಂತೆಯೇ ಅನೇಕ ಹೊಸ ಸಂಸ್ಕೃತಿಗಳ ಆಗಮನವಾಗುತ್ತಿದ್ದ ಕಾಲ. ಜನರ ಮನದಾಳದಲ್ಲಿ ಹಳೆಯುದನ್ನು ಬಿಡದ ಹೊಸದಕ್ಕೆ ಹೊಂದಿಕೊಳ್ಳಲಾರದಂತಹ ಕಾಲ. ಜನರಲ್ಲಿ ಸುಖಸಂಪತ್ತುಗಳು ಹೆಚ್ಚುತ್ತಿದ್ದರೂ ಮನದಲ್ಲಿ ನಿರಂತರ ಆತಂಕಗಳು ಮನೆಮಾಡಿದ್ದ ಕಾಲ. ಅಧಿಕಾರಿಗಳಿಂದ ಸುಲಿಗೆ, ದಂಡನೆ ಗ್ರಾಮಾಂತರದಲ್ಲಾದರೆ, ನಗರಗಳಲ್ಲಿ ಕಾಮುಕರಿಂದ ಪೀಡೆ, ತೆರಿಗೆಯ ಭೀತಿ, ಪ್ರಯಾಣಗಳಲ್ಲಿ ಯಾದರೋ ದರೋಡೆ, ಕೊಲೆ, ಸುಲಿಗೆಗಳನ್ನು ನಿರಂತರ ಜನ ಅನುಭವಿಸುತ್ತಿದ್ದ ಸಂಕೀರ್ಣ ಪರಿಸ್ಥಿತಿ ದೇಶದಾದ್ಯಂತ ಇದ್ದಂತಹ ಕಾಲ.

ಇಂತಹ ಸಂಕೀರ್ಣಕಾಲದಲ್ಲಿ ದೇಶದ ಹಲವೆಡೆ ಹಿರಿಯ ಚೈತನ್ಯಗಳು ಜನ್ಮತಾಳಿ, ಜನಸಾಮಾನ್ಯರಿಗೆ ಮಾರ್ಗದರ್ಶನಕ್ಕೆ ನಿಂತುದು, ಈ ಯುಗಧರ್ಮದ ವೈಶಿಷ್ಟ್ಯ.

ಕರ್ನಾಟಕದಲ್ಲಿ ಶ್ರೀ ಶ್ರೀಪಾದರಾಯರು, ಶ್ರೀ ವ್ಯಾಸರಾಯ ಸ್ವಾಮಿಗಳು, ಶ್ರೀ ಪುರಂದರ ದಾಸರು, ಶ್ರೀ ಕನಕದಾಸರು ಬದುಕಿ ಬಾಳಿದ ಕಾಲದಲ್ಲೇ ಉತ್ತರ ಭಾರತದಲ್ಲಿ ರಮಾನಂದರು (1400-1470) ಕಬೀರದಾಸರು (1440-1518) ರಾಜಾಸ್ಥಾನದಲ್ಲಿ ಮೀರಾಬಾಯಿ (1470-ಜನನ) ಪಂಜಾಬಿನಲ್ಲಿ ಗುರು ನಾನಕದೇವ (1469-1539) ಬಂಗಾಳದಲ್ಲಿ ಕೃಷ್ಣ ಚೈತನ್ಯರು (1485-1533) ಮಹಾರಾಷ್ಟ್ರದಲ್ಲಿ ನಾಮದೇವ ಸಿಂಪಿಗಳು (ಸುಮಾರು1400) ಗುರು ಅಮರದಾಸರು (1574ರ ಸುಮಾರು) ವ್ರಜಭೂಮಿಯಲ್ಲಿ ಸೂರದಾಸರು (1596ಸುಮಾರು) ಕಾಶಿಯ ಕಡೆ ತುಳಸೀದಾಸರು (1532-11632) ಮೊದಲಾದ ಸಂತರು ಭಾರತದಾದ್ಯಂತ ಅಲ್ಲಲ್ಲೇ ಕಾಣಿಸಿಕೊಂಡರು. ಧರ್ಮಶ್ರದ್ಧಾಳುವೂ, ಮೇಧಾವಿಯೂ ಆದ ಅಕ್ಬರ್ ಚಕ್ರವರ್ತಿ ಸರ್ವಧರ್ಮ ಸಮನ್ವಯಕ್ಕೆ ಪ್ರಯತ್ನಿಸಿದ ಫಲವಾಗಿ ತಾಹಿದ್ - ಇ - ಇಲಾಹಿ ಎಂಬ ಧರ್ಮ ಪ್ರವರ್ತವಾದುದು 1582ರಲ್ಲಿ.

ಪ್ರಸ್ತುತ ಧರ್ಮಕ್ಕೆ ಯುಗಧರ್ಮವನ್ನುಸರಿಸಿ ಹೊಸ ತಿರುವು ಅತ್ಯಗತ್ಯವೆಂದು ಕಂಡುಕೊಂಡ ಸಂತರುಗಳಿವರು. ಇವರಲ್ಲಿ ಬಹುಮಂದಿ ವೈಷ್ಣವರು. ಜನಸಮಾನ್ಯರಿಗೆ ಅಸಾಧ್ಯವಾದ ಪೂಜೆ, ಹೋಮ, ಯಾಗ, ಯಜ್ಞಾದಿಗಳನ್ನು ಬದಿಗೆ ಸರಿಸಿ, ಸುಲಭ ಪೂಜೆಯ ಸ್ವಾರಸ್ಯವನ್ನೂ ನಾಮ ಕೀರ್ತನೆ (ಭಜನೆ)ಯ ಹೆಗ್ಗಳಿಕೆಯನ್ನೂ ಎತ್ತಿ ಹಿಡಿದವರು. ಭಕ್ತಿಯ ಹೆಗ್ಗಳಿಕೆಯನ್ನು ಜನಸಾಮಾನ್ಯರಿಗೆ ತಿಳಿಸುವುದರಲ್ಲೇ, ತಮ್ಮ ಜೀವನವನ್ನು ಸವೆಸಿದವರು. ರಮಾನಂದರು ರಾಮಾನುಜಾಚಾರ್ಯರ ಪ್ರಶಿಷ್ಯರ ಶಿಷ್ಯರು. ಅವರು ಕಾರಣಾಂತರದಿಂದ ಕಾಶಿಗೆ ಹೋಗಿ ಅಲ್ಲಿ ಪಂಚಗಂಗಾ ಕ್ಷೇತ್ರದಲ್ಲಿ ವೈಷ್ಣವ ಧರ್ಮ ಪ್ರಚಾರ ಮಾಡುತ್ತಾ ನಿಂತರು. ಇವರು ರಾಮ ಭಕ್ತರು. ಇವರ ಶಿಷ್ಯರೇ ಕಬೀರ್‌ದಾಸರು. ಇವರು ಪುರಂದರ ದಾಸರಿಗಿಂತ 45 ವರ್ಷ ಕಿರಿಯರು. ಇವರು ದೋಹೆಗಳ ಮುಖಾಂತರ ಭಕ್ತಿ ಪ್ರಚಾರ ಮಾಡಿದರು. ಇವರನ್ನು ಹಿಂದೂಗಳು ಹಿಂದೂಗಳೆಂದೂ, ಮುಸಲ್ಮಾನರು ಮುಸಲ್ಮಾನರೆಂದು ಆದರಿಸಿದರು.

ಭಕ್ತಿ ಪಂಥ' ದ್ರವಿಡ ದೇಶದಿಂದ ಪ್ರಾರಂಭವಾಯಿತೆನ್ನುತ್ತಾರೆ. ರಾಮಾನು ಜಾಚಾರ್ಯರು ಪ್ರತಿಪಾದಿಸಿದ ವಿಶಿಷ್ಟಾದ್ವೈತದಿಂದಲೇ ಭಕ್ತಿ ಮಾರ್ಗ ಸ್ಪಷ್ಟವಾಯಿತೆನ್ನುತ್ತಾರೆ. ವಿಶಿಷ್ಟಾದ್ವೈತದ ಪ್ರವರ್ತಕರುಗಳಿಂದ ರಚಿಸಲ್ಪಟ್ಟ ಭಕ್ತಿಗೀತೆಗಳ ಅಪಾರ ಸಂಗ್ರಹ ತಮಿಳಿನಲ್ಲಿದೆ ಎನ್ನುತ್ತಾರೆ. ಅನೇಕ ಆಳ್ವಾರರುಗಳು, ದೇಶಿಕಾಚಾರ್ಯರುಗಳು, ರಾಮಾನುಜಾರ್ಯರಿಗಿಂತ ಹಿಂದೆಯೇ ಅಂದರೆ ಸುಮಾರು ಕ್ರಿ.ಶ. ನಾಲ್ಕನೇ ಶತಮಾನದಿಂದಲೇ ಸಗುಣಬ್ರಹ್ಮ (ವಿಗ್ರಹರೂಪಿ ಭಗವಂತ)ನ ಉಪಾಸನೆಯನ್ನು ಮಾಡುತ್ತಿದ್ದರು. ಶ್ರೀ ರಾಮಾನುಜಾಚಾರ್ಯರೂ ಸಹ ಆಳ್ವಾರರುಗಳ ಪರಂಪರೆಯಿಂದಲೇ ಬಂದವರು. ಆಳ್ವಾರರುಗಳು ಧರ್ಮ ಗ್ರಂಥವಾದ ಪ್ರಬಂಧಗಳನ್ನು ನಾಥಮುನಿ ಎಂಬವರು ಸಂಗ್ರಹ ಮಾಡಿದರು. ರಾಮಾನುಜಾಚಾರ್ಯರು ಅವರ ಶಿಷ್ಯ ಪ್ರಶಿಷ್ಯರು. ಭಕ್ತಿ ಪಂಥ'ವನ್ನು ಮುಂದುವರಿಸಿದರು. ರಾಮಾನುಜಾರ್ಯರ ಪ್ರ ಶಿಷ್ಯರ ಶಿಷ್ಯರಾದ ರಾಮಾನಂದರು ಉತ್ತರ ಭಾರತದಲ್ಲಿ ಭಕ್ತಿ ಪಂಥ ಹರಡಲು ಕಾರಣರಾದರು. ಈ ವಿಷಯವನ್ನು ತುಳಸೀದಾಸರ `ರಾಮಚರಿತ ಮಾನಸ್'ಗೆ ಟೀಕೆಯನ್ನೂ ಮುನ್ನುಡಿಯನ್ನೂ ಬರೆದಿರುವ, ಚತುರ್ವೇದಿ ದ್ವಾರಕಾ ಪ್ರಸಾದ ಶರ್ಮ ತಮ್ಮ ಮುನ್ನುಡಿಯಲ್ಲಿ ಪ್ರಸ್ತಾಪಿಸಿದ್ದಾರೆ. ಕಬೀರರು ವೈಷ್ಣವ. ಸಂಪ್ರದಾಯಿಂದ ಪ್ರಭಾವಿತರಾದ ಮತ್ತೊಬ್ಬ ಸಂತರು. ಪಂಜಾಬಿನ 'ಗುರುನಾನಕ ದೇವ'ಇವರು ವಾಹೀಶ್ವರ ಉಪಸಾನೆಯನ್ನು ಬೋಧಿಸಿ ಜನಜಾಗೃತಿಯನ್ನು ಉಂಟುಮಾಡಿದವರು. ಇವರ ರಚನೆಗಳೆಲ್ಲಾ ಸ್ತೋತ್ರ ರೂಪದಲ್ಲಿದೆ. ಇವರು ಬಾಬರನ ಸಮಕಾಲೀನರು. ಇದೇ ಪರಂಪರೆಯಲ್ಲಿ ಬರುವ 'ಅರ್ಜುನದೇವ' ಪುರಂದರ ದಾಸರು ಕಾಲವಾದ ನಂತರ 16 ವರ್ಷಕ್ಕೆ ಹುಟ್ಟಿದವರು ಇವರು ರಚಿಸಿರುವ ಗ್ರಂಥಾಸಾಹೇಬ್ ಇದು ಅನೇಕ ಸಂತರ ಸಂತವಾಣಿಯ ಸಂಗ್ರಹವಾಗಿದೆಯೆಂದೂ ಇದರಲ್ಲಿ ಬೇರೆ ಬೇರೆ ಸಂಪ್ರದಾಯದ ಸಂತರ ದೋಹೆಗಳೂ ರಚನೆಗಳೂ, ಸೇರಿವೆಯೆಂದೂ ಇದರಲ್ಲಿ ಸಂತ 'ಕಬೀರದಾಸ'ರ ಮತ್ತು ಸಂತ `ರವಿದಾಸ್' (ರಯಿದಾಸ್) ರ ರಚನೆಗಳು ಸೇರಿವೆಯೆಂದೂ ಸಂತ್ತರಯಿದಾಸರ ರಚನೆಗಳು ಹಿಂದಿಯಲ್ಲಿದ್ದು ಇದನ್ನು ಆರತಿಯ ಸಮಯದಲ್ಲಿ ಪ್ರಪಂಚದಾದ್ಯಂತ ಶಿಖ್ ಸಂಪ್ರದಾಯಸ್ಥರು ಹಾಡುವ ಪದ್ಧತಿ ಇಂದಿಗೂ ನಡೆದು ಬಂದಿದೆ. ಇದು ಆಗಿನ ಯುಗ ಧರ್ಮವನ್ನು ಸೂಚಿಸುತ್ತದೆ. ವಲ್ಲಭಾಚಾರ್ಯರು ಪುರಂದರದಾಸರಿಗಿಂತ 6 ವರ್ಷ ಹಿರಿಯರು ಕೃಷ್ಣಗೋದಾವರಿ ನಡುವೆ 'ಕಾಕರವಾಡ' ಎಂಬ ಗ್ರಾಮದಲ್ಲಿ ಹುಟ್ಟಿ ಕಾಶಿಯಲ್ಲಿ ವಿದ್ಯಾಭ್ಯಾಸ ಮಾಡಿ ವ್ರಜ ಭೂಮಿಯಲ್ಲಿ ವೈಷ್ಣವ ಮತ ಪ್ರಚಾರ ಮಾಡಿದರು. ಇವರು ಕೃಷ್ಣದೇವರಾಯನ ಕಾಲದಲ್ಲಿ ಹಂಪೆಗೆ ಬಂದಿದ್ದರೆಂದೂ ರಾಯನು ಇವರಿಗೆ ಸನ್ಮಾನಪೂರ್ವಕವಾಗಿ ಕನಕಾಭಿಷೇಕ ಮಾಡಿದನೆಂದೂ ಉಲ್ಲೇಖವಿದೆ. ಇವರು 1537ರಲ್ಲಿ ದೇಹತ್ಯಾಗ ಮಾಡುವ ಮೊದಲು ಬ್ರಹ್ಮಸೂತ್ರಗಳ ಮೇಲೆ, ಭಗವದ್ಗೀತೆಯ ಮೇಲೆ, ಶುದ್ಧಾದ್ವೈತ' ಸಂಪ್ರದಾಯದ ಭಾಷ್ಯಗಳನ್ನು ರಚಿಸಿ

ಗೋವರ್ಧನದಲ್ಲಿ ಶ್ರೀನಾಥ್ ಮಂದಿರವನ್ನು ವ್ಯವಸ್ಥೆ ಮಾಡಿದರು. ಇವರು ಭಾಗವತ ಪುರಾಣವನ್ನು ಮೆಚ್ಚಿಕೊಂಡಿದ್ದವರು. ಉಪನಿಷತ್ತು ಭಗವದ್ಗೀತೆ ಮತ್ತು ಬ್ರಹ್ಮಸೂತ್ರಗಳೆಂಬ ಪ್ರಸ್ಥಾನತ್ರಯದೊಂದಿಗೆ ಭಾಗವತವನ್ನೂ ಪ್ರಮಾಣಗ್ರಂಥ'ವೆಂದು ಸ್ವೀಕರಿಸಿದವರು. ಹರಿದಾಸರಿಗೆ. ಭಾಗವತವೇ ಪ್ರಮಾಣ ಗ್ರಂಥ (ಅದರಲ್ಲಿಯೂ ಭಾಗವತದ ದಶಮಸ್ಕಂದ) ವೆಂಬುದನ್ನು ನೆನಪಿಗೆ ತಂದು ಕೊಳ್ಳಬೇಕು. ಭಾಗವತವನ್ನೇ ಅವಲಂಬಿಸಿ ವೈಷ್ಣವ ಧರ್ಮ ಪ್ರಚಾರ ಮಾಡಿದವರಲ್ಲಿ ಮತ್ತೊಬ್ಬ ಹಿರಿಯರು ಹಾಗೂ ಸಂತರು ಕೃಷ್ಣ ಚೈತನ್ಯರು 'ಗೌರಾಂಗದೇವ' ಇವರನ್ನು ರಾಮಕೃಷ್ಣಪರಮಹಂಸರು ತಮ್ಮ ಮಾರ್ಗದರ್ಶಕರೆಂದು ಭಾವಿಸಿದ್ದರು. ಇವರು ಪಶ್ಚಿಮಬಂಗಾಳದವರು ಪುರಂದರದಾಸರು ಹುಟ್ಟಿದ ವರ್ಷದಲ್ಲೇ ಹುಟ್ಟಿದವರು ಪುರಿಜಗನ್ನಾಥನ ಭಕ್ತರು, ವಂಗದೇಶದ ಅನುಭಾವಿಗಳೂ ಗೌಡೀಯ ಸಂಪ್ರದಾಯ ಪ್ರವರ್ತಕರು ಇವರು ದಕ್ಷಿಣದೇಶಕ್ಕೆ ಬಂದಿದ್ದರೆಂದೂ, ಉಡುಪಿಗೆ ಹೋಗಿ 'ವಾದಿರಾಜ ಸ್ವಾಮಿ'ಗಳನ್ನು ಕಂಡಿದ್ದರೆಂದೂ ಉಲ್ಲೇಖವಿದೆ. ಇವರ ಗುರು ಪರಂಪರೆಯಲ್ಲಿ ಮಧ್ವಾಚಾರ್ಯರೂ ಸೇರಿದ್ದಾರೆ. ಕೃಷ್ಣಚೈತನ್ಯರು ರಾಧಾಕೃಷ್ಣರ ಅಮರ ಪ್ರೇಮವನ್ನು ಆದರ್ಶವಾಗಿ ಹಿಡಿದು, ವೈಷ್ಣವ ಧರ್ಮಪ್ರಚಾರ ಮಾಡಿದರು. ಭಾಗವತದಲ್ಲಿಲ್ಲದ ರಾಧೆ ಕೃಷ್ಣನೊಂದಿಗೆ ಸೇರಿಕೊಂಡಿದ್ದು ಈ ಪಂಥದ ಪ್ರಭಾವದಿಂದಲೇ ಎನ್ನುತ್ತಾರೆ. ಪುರಂದರದಾಸರು ಕಾಲವಾಗುವುದಕ್ಕೆ 30 ವರ್ಷ ಮುಂಚೆ ಇವರು ಕಾಲವಾದರು. ಮೇವಾಡದ ರಾಣಾನ ಸಂಸೆ ಮೀರಾಬಾಯಿ 1470 ಪುರಂದರದಾಸರಿಗಿಂತ 15 ವರ್ಷ ಹಿರಿಯಳು. ಈಕೆಯೂ ಸಹ ವೈಷ್ಣವ ಪಂಥವನ್ನು ಹಿಡಿದವಳು. ಅವಳ ಭಕ್ತಿ ಗೀತೆಗಳು (ಮೀರಾ ಭಜನ್) ಇಂದೂ ಪ್ರಚಾರದಲ್ಲಿದೆ. ಪುರಂದರದಾಸರು ವೃದ್ಧರಾಗಿದ್ದಾಗ ಉತ್ತರ ಭಾರತದಲ್ಲಿ ಕಾಣಿಸಿಕೊಂಡ ಸಂತರಲ್ಲಿ ಪ್ರಮುಖರು `ತುಳಸಿದಾಸರು` ಇವರು ರಚಿಸಿದ `ರಾಮಚರಿತ ಮಾನಸ` ಹಿಂದಿಯಲ್ಲಿ ಅತಿ ಮುಖ್ಯವಾದ ಗ್ರಂಥವಾಗಿದೆ. ಪುರಂದರ ದಾಸರು ಕಾಲವಾದ ಮೇಲೆ ಇವರು ಬಹಳಕಾಲ ಉತ್ತರ ಭಾರತದಲ್ಲಿ ವೈಷ್ಣವ ಮತ ಪ್ರಚಾರಕರಾಗಿದ್ದರು. ಇವರಿಗೆ ರಾಮನೇ ಬ್ರಹ್ಮ. ಪುರಂದರದಾಸರು ಕಾಲವಾದ ತರುಣದಲ್ಲೇ ಹುಟ್ಟಿದವರು. `ಸೂರದಾಸರು` ಇವರು 60 ಸಾವಿರ ದೋಹೆಗಳನ್ನು (ಎರಡನೇ ಸಾಲಿನ ಪದ್ಯ) ರಚನೆ ವ್ರಜ ಭಾಷೆಯಲ್ಲಿ ರಚಿಸಿದ್ದಾರೆ. ಇವರ ಹುಟ್ಟು ಕುರುಡರಾಗಿದ್ದುದ್ದರು. ಬಾಲಕೃಷ್ಣ ಇವರ ಆರಾಧ್ಯ ದೈವ ಪುರಂದರದಾಸರ ಕಾಲಕ್ಕೆ ಸ್ವಲ್ಪ ಮುಂಚೆ ಮಹಾರಾಷ್ಟ್ರದಲ್ಲಿ ಜ್ಞಾನೇಶ್ವರರು (ಮರಣ 1296) ಮತ್ತು ನಾಮದೇವ ಸಿಂಪಿ (1270-1350)ಯವರು ವಿಠ್ಠಲ ಭಕ್ತಿಯನ್ನು ಬೇರೂರಿಸಿದ್ದರು. ಪುರಂದರ ದಾಸರ ರಚನೆಗಳಲ್ಲಿ ನಾಮದೇವರ ಪ್ರಭಾವ ಕಾಣಬಹುದು. ನಾಮದೇವರಿಂದಲೇ ಆರ್ತಭಕ್ತಿ, ನಾಮ ಸಮ್ಮರಣೆಯ ಸ್ಫೂರ್ತಿ ಪುರಂದರ ದಾಸರಿಗೆ ಸಿಕ್ಕಿತೆಂಬ ಮಾತಿನಲ್ಲಿ ಹುರುಳಿದೆ. ನಾಮದೇವರ ಅಭಂಗಗಳಲ್ಲಿ ಕಾಣುವ ಅನೇಕ ಭಾವನೆಗಳನ್ನು ಪುರಂದರದಾಸರ ಪದಗಳಲ್ಲಿ ಕಾಣಬಹುದು. ಕನಕದಾಸರು ಮತ್ತು ಪುರಂದರದಾಸರು ಸಮಕಾಲೀನರು. ಕನಕದಾಸರು ಪುರಂದರದಾಸರನ್ನು ತಮ್ಮ ರಚನೆಗಳಲ್ಲಿ ಎಲ್ಲಿಯೂ ಹೆಸರಿಸಿಲ್ಲ. ಆದರೆ ಪುರಂದರ ದಾಸರ ರಚನೆ `ಅನುತೀರ್ಥ ಕೊಡುವಾಗ ಕನಕನ್ನ ಕರೆ ಎನಲು, ಧೂರ್ತರಾಗಿದ್ದ ವಿದ್ವಾಂಸರೆಲ್ಲ ಸಾರ್ಥಕವಾಯಿತು. ಇವರ ಸನ್ಯಾಸಿತನವೆಲ್ಲ` ಎಂಬ ರಚನೆಯಲ್ಲಿ (ಬಾಳೇ ಹಣ್ಣಿ ಕಥೆ ಬರುತ್ತದೆ) ಕನಕದಾಸರ ಬಗ್ಗೆ ಹಾಡಿದ್ದಾರೆ. ಕಾರಣ ಕನಕದಾಸರ ಕಾಲದಲ್ಲಿ ಇನ್ನೂ ಪುರಂದರದಾಸರು ಖ್ಯಾತಿಗೆ ಬರದಿರುವುದೇ ಕಾರಣವಿರಬೇಕೆಂದು ವಿದ್ವಾಂಸರುಗಳ ಊಹೆ.

ಹೀಗೆ ಯುಗಧರ್ಮ ಮೇಲುಗೈ ಆಗಿರುವಾಗ, ಭಕ್ತಿಯ ದಾರಿ ಸ್ಪಷ್ಟವಾಯ್ತು. ಶಾಸ್ತ್ರಪಾಂಡಿತ್ಯ, ಶುಷ್ಕ ತರ್ಕ, ಕರ್ಮಕಾಂಡಗಳು, ಹಿಂದೆಬಿದ್ದುವು. ಜ್ಞಾನಮಾರ್ಗ, ಕರ್ಮಮಾರ್ಗಗಳೆರಡನ್ನೂ ಮೀರಿ ಭಕ್ತಿ ಮಾರ್ಗ ಈ ಕಾಲದಲ್ಲಿ ನಿಂತಿತು. ಹಾಗೂ ಬೆಳೆಯಿತು. ಈ ಮಾರ್ಗದಲ್ಲಿ ಬಹುಜನ ಸುಲಭವಾಗಿ ಕೈಕೊಳ್ಳಬಹುದಾದ ಸಂವಿಧಾನವನ್ನು ಎತ್ತಿ ಹೇಳಿದ್ದಾರೆ. ಈ ಸಂವಿಧಾನದಲ್ಲಿ ಅತಿ ಮುಖ್ಯವಾದುದು ನಾಮಸ್ಮರಣೆ. 'ಹರಿ ಸ್ಮರಣೆ ಮಾಡೋ ನಿರಂತರಾ' ರಾಮಾನಂದ, ಕಬೀರ, ನಾನಕ, ಚೈತನ್ಯ, ನಾಮದೇವ, ಮೀರಾಬಾಯಿ, ಎಲ್ಲರೂ ನಮ್ಮ ಶ್ರೀಪಾದರಾಯರು, ವ್ಯಾಸರಾಯ ಸ್ವಾಮಿಗಳು, ಪುರಂದರದಾಸರು, ಕನಕದಾಸರು ಪ್ರತಿಯೊಬ್ಬರೂ ನಾಮಸ್ಮರಣೆಯ ಹಿರಿಮೆಯನ್ನು ಹಾಡಿ ಹೊಗಳಿದ್ದಾರೆ. ನಾಮಸ್ಮರಣೆಯಿಂದ ಭಕ್ತಿ ಪರಿಪಕ್ವವಾಗುವ ಬಗೆಯನ್ನು ವಿವರಿಸಿದರು. ನಾಮಸ್ಮರಣೆಗೆ ಆಧ್ಯಾತ್ಮಿಕ ತಾತ್ಪರ್ಯ ಇರುವಂತೆಯೇ ಸಾಮಾಜಿಕ ತಾತ್ಪರ್ಯವೂ ಇದೆ. ಜ್ಞಾನಮಾರ್ಗ ಮತ್ತು ಕರ್ಮ ಮಾರ್ಗಗಳಲ್ಲಿ ವರ್ಣಾಶ್ರಮದ ಕಟ್ಟುಪಾಡುಗಳುಂಟು, ಅಧಿಕಾರ ವಿವೇಚನೆ ಉಂಟು, ಪೂರ್ವಸಿದ್ಧತೆಯ, ಅಗತ್ಯವುಂಟು ಇದೆಲ್ಲಾ ಜನಸಾಮಾನ್ಯರಿಗೆ ದಕ್ಕುವಂತಹುದಲ್ಲ. ಆದರೆ ಭಕ್ತಿ ಮಾರ್ಗದಲ್ಲಿ ಜನಸಮಾನ್ಯರ, ಬಹುಜನರ, ಸ್ತ್ರೀ ಪುರುಷರೆಲ್ಲರ ಅಭ್ಯುದಯವನ್ನು ಸಾಧಿಸುವ ಬಗೆಯನ್ನು ಕುರಿತದ್ದು. ಬೇರೆ ಬೇರೆ ಹಿನ್ನೆಲೆಗಳ ಜನರೆಲ್ಲರೂ, ಹಿತವಾಗಿ, ಅನುಕೂಲವಾಗಿ, ಸುಲಭವಾಗಿ ಪುರುಷಾರ್ಥ ಸಾಧನೆ ಮಾಡಲು ನಾಮಸ್ಮರಣೆ, ಹರಿಕೀರ್ತನೆ, ಭಜನೆ ಇವು ಸಾಧನೆಗಳೆಂದು, ಆ ಕಾಲದ ಎಲ್ಲಾ ಸಂತರೂ ಒತ್ತಿ ಹೇಳಿದರು.

ಆಧ್ಯಾತ್ಮಿಕತೆಯು ಸಾಮಾನ್ಯ ಜೀವನದಲ್ಲೇ ಮೂಡಿ ಬರುವುದು ಸಾಧ್ಯವೆಂದೂ, ಹಾಗೆ ಮೂಡಿ ಬರಬೇಕಾದುದೇ ಸಹಜವೆಂದೂ ಎಲ್ಲಾ ಸಂತರೂ ಕಾಣಿಸಿರುವರು. ಬಹುಮಟ್ಟಿಗೆ ಇವರೆಲ್ಲಾ ಗೃಹಸ್ಥರು, ಸನ್ಯಾಸಿಗಳಲ್ಲ. ತಂತಮ್ಮ ಪ್ರಾಪಂಚಿಕ ಪರಿಸರಗಳಲ್ಲಿ ಇದ್ದವರೇ, ಸಾಮಾನ್ಯಜನರಂತೆ ಬಾಳನ್ನು ಕಳೆದು. ಜನರ ಪ್ರೀತಿಯನ್ನು ಸಂಪಾದಿಸಿರುವರೇ ಮೇಲಾಗಿ ಇವರೆಲ್ಲಾ ಕವಿಗಳು ಕಾವ್ಯದ ಹೊನಲಿನಲ್ಲಿ ಆಧ್ಯಾತ್ಮದ ಸೊಗಸನ್ನು ಬೆರೆಸಿ ಸಾಮಾನ್ಯ ಜನರನ್ನು ದೃಷ್ಟಿಯಲ್ಲಿಟ್ಟು ರಚಿಸಿದ ಸರಳ ಶೈಲಿಯ ರಚನೆಗಳಾಗಿವೆ. ಇವರ ರಚನೆಗಳು ಪ್ರೌಢಸಾಹಿತ್ಯ ಶ್ರೇಣಿಗೆ ಸೇರುವುದಿಲ್ಲ. ಇವೆಲ್ಲಾ ಸಮಯ

FOR ALL YOUR DOMESTIC AND INTERNATIONAL TRAVEL ARRANGEMENTS
CONTACT
AUGUST TRAVEL SERVICE
Agents For
INDIAN AIR LINES,
EAST WEST,
MODI LUFT &
JET AIRLINES
REGD. OFFICE:
3/15 ASHIANA, SECTOR 17,
VASHI, NEW BOMBAY.
PHONE: 768 25 91 * 768 25 58
767 09 02
GRAMS: AUGTRASERV
ALSO AT:
2/16, KABBUR HOUSE,
SION (E), BOMBAY-400 022.
PHONE: 407 29 84 * 409 35 73
* 407 77 50

ಸಂದರ್ಭಗಳನುಸಾರವಾಗಿ ಹೊಮ್ಮಿದ ಆಶು ಕವಿತೆಗಳು.

ಇವರೆಲ್ಲಾ ಸಮಾಜವನ್ನು ತಿದ್ದಲೆಂದು ಹೊರಟ ಸಮಾಜ ಸುಧಾರಕರು. ಇವರಿಗೆ ಸಮಾಜ ಸುಧಾರಣೆ. ತಮ್ಮ ಮುಕ್ತಿಗಿಂತ ಅತ್ಯಾಗತ್ಯವಾಗಿತ್ತು. ಸನ್ಮಾರ್ಗ, ಸಚ್ಚಾರಿತ್ರ, ಸತ್ಯ ಸಂಧತೆಯ ಪರಿಶುದ್ಧ ಜೀವನ ಇವುಗಳು ಪರಮಾತ್ಮನನ್ನು ಕಾಣುವ ಮಾರ್ಗವೆಂದು ಬೋಧಿಸಿದರು.

ಪುರಂದರದಾಸರು ಇಂತಹ ಹಿನ್ನೆಲೆಯಲ್ಲಿ ತಮ್ಮನ್ನು ರೂಪಿಸಿಕೊಂಡರು.

**ಪುರಂದರ ಸಾಹಿತ್ಯದ ಪಾತ್ರ ಹಾಗೂ ಲಕ್ಷಣ.**

1565ರಲ್ಲಿ ತಮ್ಮ 85ನೇ ವಯಸ್ಸಿನಲ್ಲಿ ಶರೀರವನ್ನು ತ್ಯಜಿಸುವರೆಗೆ ಪುರಂದರ ದಾಸರು ಕನ್ನಡದಲ್ಲಿ ಎಡೆಬಿಡದೆ ಹಾಡುಗಳನ್ನು ರಚಿಸಿ ಹಾಡಿದರು. ಈ ಹಾಡುಗಳನ್ನು ದೇವರ ನಾಮಗಳೆಂದೂ, ಪದಗಳೆಂದೂ ಕರೆಯುವ ವಾಡಿಕೆ ಇದೆ. ಈ ಹಾಡುಗಳಲ್ಲಿ.

1. ತೀರ್ಥ ಮಹಿಮೆ (ಕೇದಾರದಿಂದ, ರಾಮೇಶ್ವರದ ವರೆಗೆ) 2. ಮಧ್ವರಾಯರಿಂದ ವ್ಯಾಸರಾಯರವರೆಗೆ, ಗುರುಸ್ತವನ, ತಂತ್ರಸಾರೋಕ್ತ ದೇವತಾ ತಾರತಮ್ಯ, ಶಾಸ್ತ್ರ ಪ್ರಮೇಯಗಳು. 3. ದೇವತಾಲೋಕ ವರ್ಣನೆಗಳು (ಬ್ರಹ್ಮಲೋಕ ಕೈಲಾಸ, ದಿಕ್ಪಾಲಕರು ಇತ್ಯಾದಿ) 4. ಪುರಾಣ ಕಥೆಗಳು. (ಭಗವದ್‌ಭಕ್ತರ ಕಥಾಸಾರ) 5) ದೇವತಾ ಮೂರ್ತಿಧ್ಯಾನ ಇತ್ಯಾದಿ (ಕೀರ್ತಿ, ಶಾಲಿಗ್ರಾಮ ಲಕ್ಷಣ) 6. ಆಹ್ನೀಕ ಪದ್ಧತಿ, ಏಕಾದಶಿ ನಿರ್ಣಯ ಇತ್ಯಾದಿ. 7. ಸೂಳಾದಿಗಳು ಮತ್ತು ಉಗಾಭೋಗಗಳು 8) ದೇವರ ನಾಮಗಳು.

ಪುರಂದರದಾಸರ ರಚನೆಯಲ್ಲಿ ಇವೆಲ್ಲವೂ ಇವೆ. ವಿಜಯದಾಸರ ಒಂದು ಪದದ ಪ್ರಕಾರ ಪುರಂದರದಾಸರ ಒಟ್ಟು ರಚನೆಗೆ 4 ಲಕ್ಷ 25 ಸಾವಿರ ಎಂದಿದೆ. ಇನ್ನೊಂದು ಕಡೆ 4 ಲಕ್ಷ 75 ಸಾವಿರ ಪುರಂದರ ದಾಸರ ರಚನೆಯೆಂದೂ ವಿಜಯದಾಸರು 25 ಸಾವಿರ ತಮ್ಮ ರಚನೆಯನ್ನು ಮಾಡಿ ಒಟ್ಟು 5 ಲಕ್ಷಕ್ಕೆ ಭರ್ತಿ ಮಾಡಿದರೆಂದೂ ಹೇಳಿಕೆಗಳಿವೆ.

ಆದರೆ ಸಂಶೋಧಕರ ಪ್ರಕಾರ ಇಂದು ದೊರಕಿರುವ ಹರಿದಾಸರೆಲ್ಲರ ರಚನೆಗಳನ್ನು ಸೇರಿಸಿದರೂ 5 ಲಕ್ಷವಿಲ್ಲ. ಇದಲ್ಲದೆ ಒಬ್ಬ ಮನುಷ್ಯನ ಜೀವಿತದ ಕಾಲದಲ್ಲಿ ಇಷ್ಟು ರಚನೆ ಮಾಡುವುದು ಅಸಾಧ್ಯವೆಂದೂ ವಿದ್ವಾಂಸರ ಮತ. ಇನ್ನೊಂದು ಅಭಿಪ್ರಾಯ ಹೀಗೂ ಇದೆ. ದಾಸಕೂಟ ವಿಜಯನಗರದ ರಾಜಧಾನಿ ಹಂಪೆಯಲ್ಲಿ ಚೆನ್ನಾಗಿ ಬೆಳೆದು ಬೇರುಬಿಟ್ಟಿದ್ದಿತಷ್ಟೆ. ವಿಜಯನಗರ ಸಾಮ್ರಾಜ್ಯ ಧಾಳಿಗೆ ಸಿಕ್ಕು ಹಾಳಾದಾಗ ಹಂಪೆಯಲ್ಲಿ ನಿರಂತರವಾಗಿ ಆರುತಿಂಗಳ ಕಾಲ, ಲೂಟಿ, ಕೊಲೆ ಸುಲಿಗೆಗೆ ಒಳಗಾದ ನಗರದಲ್ಲಿ ಏನು ತಾನೇ ಉಳಿದಿತ್ತು ಮತ್ತು ದಾಸಕೂಟದ ದಾಸರುಗಳು ಆ ಸಾಹಿತ್ಯ ಭಂಡಾರದಲ್ಲಿ ಎಷ್ಟು ಉಳಿಸಲು ಸಾಧ್ಯವಾಯ್ತು ಎಂಬುದನ್ನು ಗಮನಿಸಬೇಕು. ಪುರಂದರದಾಸರು ಕಾಲವಾದ ಮೇಲೆ ವಿಜಯದಾಸರು ಸುಮಾರು ನೂರು ನೂರಿಪ್ಪತ್ತು ವರ್ಷದ ನಂತರ ಪುರಂದರ ಸಾಹಿತ್ಯವನ್ನು ಸಂಗ್ರಹಿಸಿದರು. ಈ ವೇಳೆಗೆ ಅದು ಜನಗಳ ಬಾಯಿಯಲ್ಲಿ ಮೂಲ ರೂಪದಲ್ಲಿದ್ದಿತೇ? ಎನ್ನುವುದೂ. ಒಂದು ಅನುಮಾನ ಹೀಗಾಗಿ ನಮಗೆ ದೊರೆತಿರುವ ಪುರಂದರ ಸಾಹಿತ್ಯದಲ್ಲಿ ಪದಗಳೇ ಹೆಚ್ಚು, ಉಗಾಭೋಗಗಳು 140 ನ್ನು ಮೀರಿಲ್ಲ. ಸೂಳಾದಿಗಳು 60ನ್ನು ಮೀರಿಲ್ಲ. ಉಳಿದವು ಪದಗಳು. ಇದೆಲ್ಲಾ ಒಟ್ಟು ಸೇರಿದಂತೆ 1,500 ಕ್ಕೆ ಮೀರಿ ಇಲ್ಲ. ಅವರದ್ದೇ ಎಂದು ಪ್ರಾಮಾಣಿಕವಾಗಿ ಹೇಳಬಹುದಾದದ್ದು 1000 ರಚನೆಗಳೆಂದು ಸಂಶೋಧಕರ ಅಭಿಪ್ರಾಯ. ಇನ್ನೂ ಕೆಲ ವಿದ್ವಾಂಸರ ಅಭಿಪ್ರಾಯದಂತೆ ಸಂಸ್ಕೃತದಲ್ಲಿ 32 ಅಕ್ಷರಗಳ ಸಮುದಾಯಕ್ಕೆ ಗ್ರಂಥವೆಂಬ ಹೆಸರಿದೆ. ಆದರೆ ಇಂದು ಇದಕ್ಕೆ ಬೇರೆಯೇ ಅರ್ಥವಿದೆ. ಇದೇ ರೀತಿ ಪುರಂದರ ದಾಸರ ಕಾಲದಲ್ಲಿ 'ಪದ' ಎಂಬುದಕ್ಕೆ ಅರ್ಥವೇನಿದ್ದಿತೋ! ಯಾವ ಅರ್ಥದಲ್ಲಿ ಇದನ್ನು ಉಪಯೋಗಿಸಿದ್ದರೋ ! ಆ ಅರ್ಥದಲ್ಲಿ 4 ಲಕ್ಷ 75 ಸಾವಿರ ಇರಬಹುದು ಎನ್ನುವವರೂ ಇದ್ದಾರೆ. ಪುರಂದರ ದಾಸರ ರಚನೆಗಳಲ್ಲಿ ಹೆಚ್ಚು ಜನ ಪ್ರಿಯವಾದವು ಪದಗಳೇ ಇವುಗಳನ್ನು ಹಾಡಲು ಸಂಗೀತ ಶಿಕ್ಷಣದ ಅವಶ್ಯಕತೆ ಇಲ್ಲ. ರಾಗ ಜ್ಞಾನದ ಅವಶ್ಯಕತೆಯೂ ಇಲ್ಲ. ಒಂದೆರಡು ಬಾರಿ ಕೇಳಿದರೆ ಸಾಕು. ಹಾಡಿನ ಧಾಟಿ ಮಾತಿನ ಮೋಡಿ ಎರಡೂ ಮನವರಿಕೆಯಾಗುತ್ತದೆ. ಸೂಳಾದಿಗಳಲ್ಲಿ ಇರುವಂತೆ ತಾಳಗಳ ಬಿಗಿ ಪದಕ್ಕೆ ಇಲ್ಲಾ ಕಾಯಿಯಲ್ಲಿರುವಂತೆ ರಾಗವಿಸ್ತರಣೆಯ ಅಗತ್ಯವೂ ಇಲ್ಲ, ಉಗಾಭೋಗದಂತೆ ಮಾತ್ರ ಗಣ, ಲಯ ಬಂಧಗಳ ಕಟ್ಟು ಪಾಡೂ ಇಲ್ಲ. ಪುರಂದರ ದಾಸರ ಪದಗಳೆಲ್ಲಾ ಸುಮಾರು 30 ರಾಗಗಳಲ್ಲಿ ಮೂಡಿ ಬಂದಿದೆ. ತಾಳಗಳಲ್ಲಿ ವಿಶೇಷವಾಗಿ ಛಾಪು, ಝಂಪೆ, ತಾಳಗಳು ಕಂಡು ಬರುತ್ತದೆ. ಪದಗಳಲ್ಲಿ ಪಲ್ಲವಿ, ಅನುಪಲ್ಲವಿಸ ಚರಣ (ನುಡಿ, ಅಪ್ಪಿ) ಎಂದು ಮೂರು ವಿಭಾಗಗಳು. ಒಂದೊಂದು ನುಡಿ ಹಾಡಿದ ಮೇಲೆ ಮತ್ತೆ ಪಲ್ಲವಿ ಹಾಡುವ ಪದ್ಧತಿ ಇದೆ. ಇದಗಳನ್ನೇ ದೇವರ ನಾಮಗಳೆಂದು ಹೇಳುವ ವಾಡಿಕೆಯುಂಟು. ಕೊನೆಯ ಚರಣ ಮುದ್ರಾ ಚರಣ (ಅಂದರೆ ಮುದ್ರಿಕೆಯನ್ನೊಳಗೊಂಡಿರುವುದು)

ಪುರಂದರದಾಸರು. ತಮ್ಮ ಜೀವಮಾನವೆಲ್ಲಾ ಪರ್ಯಟನೆ ಮಾಡುತ್ತಿದ್ದರು. ನಾನಾ ಕ್ಷೇತ್ರಗಳನ್ನೂ, ತೀರ್ಥಗಳನ್ನೂ ಸಂದರ್ಶಿಸಿ, ರಚನೆ ಮಾಡಿದ್ದಾರೆ 'ಸಾಸಿರ ನಾಮದ ವೆಂಕಟರಮಣ' ಇವರ ನೆಚ್ಚಿನ ದೈವ. ಇವನ ಮೇಲೆ ರಚಿಸಿರುವ ರಚನೆಗಳೆಷ್ಟೋ ! ಇದರಲ್ಲಿ ಭಗವತ್ ಸ್ವರೂಪ, ಸಾಧನೆ. ಭಕ್ತಿ, ವಿರಕ್ತಿ, ಜ್ಞಾನ, ಸಾಮಾಜಿಕ ಮೌಲ್ಯಗಳು, ಇವೆಲ್ಲವನ್ನೂ ಒಳಗೊಂಡಿವೆ. ದಾಸರು ಗೃಹಸ್ಥರೇ ಆಗಿದ್ದು, ಕೇರಿ ಕೇರಿಗಳಲ್ಲಿ ತಿರುಗಿ ಜನಗಳೊಂದಿಗೆ ಬೆರೆತು ಅವರ ಕಷ್ಟ ಸುಖಗಳನ್ನು, ಅರಿತು ಅವರ ಕರೆ ಕೋರೆಗಳನ್ನು ತಿದ್ದಿ ಸಮಾಧಾನ ಮಾಡಿ ಧೈರ್ಯ ಹೇಳಿ, ಮಾರ್ಗದರ್ಶನ ಮಾಡಿದ ಕೃತಿಗಳೂ ಇವೆ. ಜನಹಿತವನ್ನು ಸಾಧಿಸುತ, ಜನಗಳನ್ನು ತಿದ್ದುವ ಸಾಮಾಜಿಕ ಹೊಣೆ ಹೊತ್ತರಲ್ಲವೇ ಹರಿದಾಸರು. ಆದ್ದರಿಂದ ಸಾಮಾಜಿಕ ರೀತಿ ನೀತಿಗಳನ್ನೂ ಕುಟುಂಬದ ತುತ್ತು ಸಹಜೀವನದ ಮೌಲ್ಯಗಳನ್ನು ಕುರಿತಂತೆ ಅನೇಕ ರಚನೆ ಮಾಡಿದ್ದಾರೆ. ಈ ಪದಗಳೆಲ್ಲಾ ಪ್ರಯತ್ನ ಪೂರ್ವಕವಾಗಿ ರಚಿಸಿದವುಗಳೆಂದು ಹೇಳಲಾಗುವುದಿಲ್ಲ. ಹಲವು ಭಕ್ತಿಯ ಆವೇಶದಿಂದ ಬಂದವು ಇನ್ನು ಕೆಲವು ಮಾನಸಿಕ ದುಗುಡ ಹಾಗೂ ಹುಮ್ಮಸ್ಸಿನಿಂದ ಮೂಡಿ ಬಂದವು. ಇದರಲ್ಲಿ ನೇರಮಾತು ಆಡುಮಾತುಗಳು ಎದ್ದು ಕಾಣುತ್ತದೆ. ಕಾವ್ಯಾಲಂಕಾರದ ಗುಣ ಕಡಿಮೆ. ಹಲವು ಪದ್ಯಗಳಲ್ಲಿ ಗ್ರಾಮ್ಯ ಪ್ರಯೋಗವೂ ಕಂಡು ಬರುತ್ತದೆ. ಕೃಷ್ಣಾವತಾರದ ಸ್ವಾರಸ್ಯದಾಸರ ಪದಗಳಲ್ಲಿ ಪ್ರಧಾನವಾಗಿದೆ. ರಾಧಾಕೃಷ್ಣರ ದಿವ್ಯ ಪ್ರೇಮವನ್ನು ನಾನಾಗಿ ಹಾಡಿ ಹೊಗಳಿದ್ದಾರೆ. ಪುರಂದರ ದಾಸರಿಗೆ ಕನ್ನಡ ಸಾಹಿತ್ಯ ಇತಿಹಾಸದಲ್ಲಿ ವಿಶಿಷ್ಟಸ್ಥಾನ ಉಂಟು. ಕರ್ನಾಟಕ ಸಂಗೀತದಲ್ಲಿ `ನಾದಬ್ರಹ್ಮರೆನಿಸಿದ ತ್ಯಾಗರಾಜರಿಗೆ ತೆಲುಗು ಸಾಹಿತ್ಯ ಚರಿತ್ರೆಯಲ್ಲಿ ಯಾವ ಸ್ಥಾನವು ಇಲ್ಲ. ಹಾಗೇ ತಾಪಾಕವಿ (ಅಣ್ಣಮಾಚಾರ್ಯರು, ಆಂಧ್ರ)ಗಳಿಗೆ ಸಂಗೀತ ಕ್ಷೇತ್ರದಲ್ಲಿರುವ ಹೆಗ್ಗಳಿಕೆ ಸಾಹಿತ್ಯ ಕ್ಷೇತ್ರದಲ್ಲಿಲ್ಲ. ಆದರೆ ಪುರಂದರದಾಸರಿಗೆ ಕನ್ನಡ ಸಾಹಿತ್ಯದಲ್ಲೂ, ಕರ್ನಾಟಕ ಸಂಗೀತದಲ್ಲೂ ಮಹತ್ತರಸ್ಥಾನವಿದೆ.

**ಪುರಂದರ ದಾಸರ ಸಾಮಾಜಿಕ**
**ಧಾರ್ಮಿಕ ನಿಲುವು.**

ಹರಿ ಸರ್ವೋತ್ತಮನೆಂದು ಸಾರುವುದೇ

ಹರಿದಾಸರ ಕರ್ತವ್ಯ. ಪುರಂದರದಾಸರ ರಚನೆಯ ಬಹುಭಾಗ ಇದಕ್ಕೆ ಸೇರಿದುದೇ ಆಗಿದೆ. ಹಾಗೇ ಅವರು ಮೆಚ್ಚಿ ಅನುಸರಿಸಿದ ಮತ ಮಧ್ವಮತ ಇದಕ್ಕೆ ಸಂಬಂಧಿಸಿದ ರಚನೆಗಳೂ ಸಹ ಇವೆ. ಈ ರಚನೆಯನ್ನು ಗಮನಿಸಿ.

'ವಿದಿತ ದೈವಗಳೆಲ್ಲಾ ವಿಷ್ಣುವಿನ ಹಿಂದೆ
ಇದಕೆ ನಾ ಫಣಿ ಫಣವ ಕೈಯ್ಯಾಗೆ ಪಿಡಿವೆ.
ಸಕಲ ತೀರ್ಥಗಳೆಲ್ಲಾ ಸಾಲಿಗ್ರಾಮದ ಹಿಂದೆ
ಸಕಲ ವೃಕ್ಷಗಳೆಲ್ಲಾ ಶ್ರೀ ತುಳಸಿಯ ಹಿಂದೆ
ಸಕಲ ದ್ರವ್ಯಗಳೆಲ್ಲಾ ವಿದ್ಯಾ ದ್ರವ್ಯದ ಹಿಂದೆ
ಪ್ರಕಟ ಗ್ರಂಥಗಳೆಲ್ಲಾ ಭಾರತದ ಹಿಂದೆ
ಮತಗಳೆಲ್ಲವೂ ಮಧ್ವಮತದ ಹಿಂದೆ
ಇತರ ವರ್ಣಗಳೆಲ್ಲಾ ವಿಪ್ರರ ಹಿಂದೆ
ವ್ರತಗಳೆಲ್ಲಾ ಹರಿವಾಸರ ವ್ರತದ ಹಿಂದೆ
ಅತಿಕ್ಷಯದ ದಾನಗಳೆಲ್ಲ ಅನ್ನದಾನದ ಹಿಂದೆ.
ಉತ್ತಮ ಗುಣಗಳೆಲ್ಲಾ ಔದಾರ್ಯದ ಹಿಂದೆ
ಮತ್ತೆ ಕರ್ಮಗಳೆಲ್ಲಾ ಮಜ್ಜನದ ಹಿಂದೆ.
ನಿತ್ಯ ನೇಮಗಳೆಲ್ಲಾ ಗಾಯತ್ರಿ ಜಪದಾ ಹಿಂದೆ
ಚಿತ್ತಜನಯ್ಯ ಶ್ರೀ ಪುರಂದರ ವಿಠಲ
ಹರಿದಾಸರ ವ್ರತ ಏಕಾದಶಿ ವ್ರತ

ವಿಷ್ಣುವಿನ ಶ್ರೇಷ್ಠತ್ವವನ್ನು ವೈಷ್ಣವ ಹರಿದಾಸರು ಹೇಳುವುದು. ಸಹಜವೇ, ವೈಷ್ಣವರು ವಿಷ್ಣು ಎಂದಾಗ, ಶೈವರು ಶಿವನೆಂದಾಗ, ಶಾಕ್ತರು ಶಕ್ತಿ ಎಂದಾಗ ಇವರೆಲ್ಲರೂ ಸೂಚಿಸುವುದು. ಆ ಪರಮಾತ್ಮನನ್ನೇ ವೇದಾಂತಿಗಳು ಪರಬ್ರಹ್ಮ ನೆನ್ನುವುದೂ ಇದನ್ನೇ. ಹರಿ ಸರ್ವೋತ್ತಮ ಪ್ರತಿಪಾದನೆಯನ್ನು ಮತದ ಛಲ ಪ್ರತಿಪಾದನೆ ಎನ್ನಲಾಗದು. ಬ್ರಹ್ಮಾಂಡದೊಳಗೂ ಹೊರಗೂ ವ್ಯಾಪಿಸಿರುವುದರಿಂದಲೇ ವಿಷ್ಣುವೆನಿಸಿದನು ಮುಕ್ತಿಗೆ ಅಡ್ಡವಾದ ದುರಿತಗಳನ್ನು ತಡೆಗಟ್ಟುವವನು ಹರಿ (ಹರಿರ್ಹರತಿ ಪಾಪಾನಿ) ಎಲ್ಲಾ ದೇವತೆಗಳೂ ತಾತ್ಪರ್ಯದಲ್ಲಿ ಆತನೇ ಎಲ್ಲ ಹೆಸರೂ ಅವನನ್ನು ಕುರಿತವೇ 'ಊರು ಒಂದು ದಾರಿ ನೂರಾರು' ಪುರಂದರ ದಾಸರ ಈ ರಚನೆಯನ್ನು ಗಮನಿಸಿ.

'ತನುವೆಂಬ ದೋಣಿಯಲಿ
ಹರಿನಾಮವೆಂಬ ಬಂಡವ ತುಂಬಿ
ವ್ಯವಹಾರವನ್ನು ಮಾಡುವೆ ನಯ್ಯಾ
ಇಂದ್ರಿಯಗಳೆಂಬ ಸುಂಕದವ ರಡ್ಡಾಡಲು
ಮುಕುಂದನ ಮುದ್ರೆಯ ತೋರಿ
ಹೊಳೆಯ ದಾಟುವೆನಯ್ಯಾ
ಪುರಂದರ ವಿಠಲನಲ್ಲಿಗೆ ಹೋಗಿ
ಮುಕುತಿ ಸುಖವೆಂಬ
ಲಾಭವಗಳಿಸುವೆ ನಯ್ಯಾ

ಎಂದು ಹಾಡಿದ್ದಾರೆ.. ದಾಸರ ಬಂಡವಾಳವೇ ಹರಿನಾಮ, ದೇಹವೇ ಈ ಸರಕನ್ನು ತುಂಬಿದ ದೋಣಿ, ಇಂದ್ರಿಯಗಳೇ ಕಾಡುವ, ಅಡ್ಡಹಾದಿಗೆಳೆಯುವ ಸುಂಕದವರು ಈ ಸುಂಕದವರಿಗೆ ಮುಕುಂದನ ಮುದ್ರೆ ತೋರಿಸಿ ಈ ಭವಸಾಗರವನ್ನು ದಾಟಿ ವಿಠಲನ ಬಳಿಯೇ. ಸಾಕಷ್ಟು ಲಾಭಕ್ಕೆ ತಮ್ಮ ಸರಕನ್ನು ಮಾಡುವ ಹಂಬಿಕೆ ದಾಸರದು. ಈ ಲಾಭವೇ 'ಮುಕ್ತಿ'

ಅಶಾಶ್ವತವಾದ ನಿಸ್ಸಾರವಾದ ಈ ಜೀವನದಲ್ಲಿ ಸಾರಯುಕ್ತವಾದುದು ಭಗವದ್ಭಕ್ತಿ ಈ ಭಕ್ತಿಯ ಊರೆಗೋಲು ಸಮಾಜಕ್ಕೆ ಅತ್ಯಾವಶ್ಯಕ 'ಧರ್ಮವೇ ಜಯವೆಂಬ ದಿವ್ಯ ಮಂತ್ರ' ಎಂದರಿತರವರು. ನಾರಾಯಣ ನಿನ್ನ ನಾಮದ ಸ್ಮರಣೆಯ, ಸಾರಾಮೃತ ಎನ್ನ ನಾಲಿಗೆಗೆ ಬರಲಿ' ಎಂಬ ದೇವರ ನಾಮದಲ್ಲಿ ಕಷ್ಟದಲ್ಲಿದ್ದರೂ, ಸುಖದಲ್ಲಿದ್ದರೂ, ನಿದ್ರೆಯಲ್ಲಿದ್ದರೂ ಎಚ್ಚರಿತ್ತಿದ್ದರೂ ನಿನ್ನ ಸ್ಮರಣೆ ನನ್ನ ನಾಲಿಗೆಗಿರಲಿ ಎಂದಿರುವುದಲ್ಲದೆ ತಮಗೇನಾದರೂ ಹುಚ್ಚು ಹಿಡಿದರೆ ನಿನ್ನ ಹುಚ್ಚೇ ಹಿಡಿಯಲಿ ಎಂದು ಕೇಳಿಕೊಂಡಿದ್ದಾರೆ. ದಾಸರ ಭಕ್ತಿಯಲ್ಲಿ ಆಡಂಬರಕ್ಕೆ ಬೂಟಾಟಿಕೆಗೆ ಎಡೆಯೇ ಇಲ್ಲ ಇದು ಗಮನಿಸಿ. ಉಗಾಭೋಗ.

ಮನಶುದ್ಧಿಯಿಲ್ಲದವನಿಗೆ ಮಂತ್ರದ ಫಲವೇನು! ತನುಶುದ್ಧಿಯಿಲ್ಲದವಗೆ ತೀರ್ಥದ ಫಲವೇನು, ಮಿಂದಲ್ಲಿ ಫಲವೇನು ಮೀನು ಮೊಸಳೆಯಂತೆ. ನಿಂತಲ್ಲಿ ಫಲವೇನು ಶ್ರೀ ಶೈಲದ ಕಾಗೆಯಂತೆ, ಹೊರಗೆ ಮಿಂದು ಒಳಗೆ ಮೀಯದವರ ಕಂಡು, ಬೆರಗಾಗಿ ನಗುತಿದ್ದ ಪುರಂದರ ವಿಠಲ.

ಎಂದು ಹಾಡಿದ್ದಾರೆ. ಬಾಹ್ಯಾಡಂಬರವಲ್ಲ ಅವನನ್ನು ಕಾಣುವ ಮಾರ್ಗ ಅಂತರಂಗದ ಶುದ್ಧಿಯೂ ಅತ್ಯಾವಶ್ಯಕವೆಂದಿದ್ದಾರೆ ಇಲ್ಲವಾದರೆ ಮೀನು ಮೊಸಳೆ ಕಾಗೆ ಗಿಂತ ಮಿಗಿಲಲ್ಲ ಮಾನವ.

ಈ ರಚನೆ ಗಮನಿಸಿ.

'ನಿನ್ನನೇ ಪಾಡುವೆ ನಿನ್ನನೇ ಪೊಗಳುವೆ, ನಿನ್ನನೆ ಬೇಡಿ ಬೇಸರಿಸುವೆ' ನಿನ್ನ ಕಾಲನು ಪಿಡಿವೆ ನಿನ್ನ ಹಾರೈಸುವೆ, ನಿನ್ನ ತೊಂಡರಿಗೆ ಕೈ ಕೊಡುವೆ, ನಿನ್ನಂತೆ ಸಾಕ ಬಲ್ಲ ದೇವರಿನ್ನುಂಟೇ। ಘನ್ನ ಪುರಂದರ ವಿಠಲ ದೇವರ ದೇವ ॥ ಸಿಂಹ ಹಸಿದರೆ ಆನೆಯ ಕುಂಭಸ್ಥಲವನ್ನೇ ಬಗೆಯುವದೆಂಬ ನಾಣ್ಣುಡಿ ರೂಢಿಯಲ್ಲಿದೆ. ನಮ್ಮ ಪುರಂದರ ದಾಸರೂ ಹಾಗೇ ಅಂತಿಂಥವರ ಮುಂದೆ ಕೈಒಡ್ಡರು ಅಂತಿಂಥವರನ್ನು ಹೊಗಳರು. ಘನ್ನ ಪುರಂದರ ವಿಠಲ ದೇವರ ದೇವನಿರುವಾಗ ಇನ್ನಾರನ್ನು ತಾನೇ ಏಕೆ ಬೇಡಲಿ ! ಕಾಡಲಿ? ಹೊಗಳಲಿ? ಎನ್ನುತ್ತಾರೆ.

ಇಲ್ಲಿ ಗಮನಿಸಿ ಇವರ ದೈವವಾದರೂ ಎಂತಹ ಸರಳ ಪೂಜೆ ಗೊಲಿವವ. 'ಹೂವ ತರುವರ ಮನೆಗೆ ಹೊನ್ನ ತರುವ ಇವಲಕುಮೀ ರಮಣ ಇವಗಿಲ್ಲಗರುವ' ಇವನಿಗೆ ಒಂದು ದಳ ಶ್ರೀ ತುಳಸೀ. ಬಿಂದು ಗಂಗೋದಕ ನಿರ್ಮಲ ಭಕ್ತಿಯೊಂದಿಗರ್ಪಿಸಿದರೆ ಮುಗಿಯಿತು. 'ಸುಲಭ ಪೂಜೆಯ ಮಾಡಿ ಬಲವಿಲ್ಲದವರು' ಹೊರಳಿ ಮಲಗುವಾಗ, ನಿಂತಾಗ, ಕಳಿತಾಗ ನೆನೆದರೂ ಸಾಕು. ಇವನನ್ನು ನೆನೆ ಎನ್ನುತ್ತಾರೆ. ಈ ನಿರ್ಮಲ ಭಕ್ತಿಯನ್ನು ಈ ರೀತಿ ವರ್ಣಿಸುತ್ತಾರೆ. ಆಧ್ಯಾತ್ಮಿಕತೆ ಯೆಂಬುದು ಬುತ್ತಿ ಇದ್ದಂತೆ ಈ ಬುತ್ತಿ ತತ್ವವೆಂಬ ಬುತ್ತಿಯನ್ನು ಕಟ್ಟಿದರೆ ಎಲ್ಲಾದರೂ ಉಣಬಹುದಂತೆ 'ಧರ್ಮವೆಂಬ ಮಡಕೆಯಲ್ಲಿ ನಿರ್ಮಲ ಮನವೆಂಬ ಗಂಗೆ ತುಂಬಿ. ಸುಜ್ಞಾನ ದುರಿಯ ಹಚ್ಚಿ ಆ ಬುತ್ತಿಯನ್ನು ಸಿದ್ಧಪಡಿಸಬೇಕಂತೆ; ಅರಿವೆಂಬ ಅರಿವೆ ಹಾಸಿ ಹರಿಗೆ ಸಮರ್ಪಣೆ ಮಾಡಿ ನಿತ್ಯ ಉಂಡು ತೃಪ್ತಿ ಪಡಬೇಕಂತೆ ನಿತ್ಯ ಜೀವನದಲ್ಲಿ ಧರ್ಮದ ಅಗತ್ಯತೆಯನ್ನು ಒತ್ತಿ ಹೇಳುತ್ತಾರೆ ದಾಸರು.

'ವಿಷಯ ದ ವಿಚಾರ ಬಿಡು
ವಿಹಿತ ಕರ್ಮವ ಮಾಡು
ವೈರಾಗ್ಯ ಭಾಗ್ಯವ ಬೇಡು

ಎಂಬುದು ಇವರ ಭಕ್ತಿಯ ನಿಲುವು 'ಭಕ್ತಿ ಬೇಕು ವಿರಕ್ತಿ ಬೇಕು ಮುಕ್ತಿಯ ಬಯಸುವವನಿಗೆ ಸದ್ಭಕ್ತಿ ಇದರಿಂದ ಹುಟ್ಟುವ ವಿರಕ್ತಿ ಇವೆರಡೂ ಇಹ ಪರ ಎರಡಕ್ಕೂ ಸಾಧನ. (ಅಂತಕನ ದೂತರಿಗೆ ಕಿಂಚಿತ್ತು ದಯವಿಲ್ಲಾ) ವ್ಯರ್ಥವಾಗಿ ಕಾಲ ಕಳೆದೆಯಾದರೆ. ದಯವಿಲ್ಲದ ಯಮದೂತರಿಗೆ. ಬಲಿಯಾಗುವೆ ಎಚ್ಚರಿಕೆ ! ಎಂದಿದ್ದಾರೆ. ದಾಸರು,ಗಂಗೆಯಲ್ಲಿ ಮುಳುಗಿದರಾಗಲಿ, ದಾನ ಧರ್ಮ ಮಾಡಿದರಾಗಲೀ ನಿಜವಾದ ಭಕ್ತಿಯಾಗದು. ಇದೆಲ್ಲವನ್ನೂ ಬಲಪಂಚಕವಿರುವವರು ಸುಲಭವಾಗಿ ಮಾಡಬಹುದು. 1) ವಿದ್ಯಾಬಲ, 2) ಜ್ಞಾನಬಲ, 3) ಸಂಸ್ಕಾರಬಲ, 4) ಧನಬಲ, 5) ದೇಹಬಲ ಇದೆಲ್ಲಾ ಇಲ್ಲದವರೂ. ಭಗವಂತನನ್ನು ಕಾಣುವ ಬಗೆಯನ್ನು ದಾಸರು ಹೇಳುತ್ತಾರೆ.

ಸುಮ್ಮನೇ ಬರುವುದೇ ಮುಕ್ತಿ
ಮನದಲ್ಲಿ ದೃಢವಿರಬೇಕು
ಜನರ ಸಂಸರ್ಗವ ನೀಗಲುಬೇಕು
ಕಾಮಕ್ರೋಧವ ಬಿಡಬೇಕು.
ಕಾಮಿನಿಯರ ಹಂಬಲ ಬಿಡಬೇಕು.
ಹೇಮದಾಸೆಯ ಸುಡಬೇಕು
ಸಂದಣಿಗಳ ಸೇರದಿರಬೇಕು
ಕೋಪ ಬಂದಾಗ ಸೈರಣೆ ಬಿಡದಿರಬೇಕು
ಹರಿಯೇ ಗುರು ವೆನ್ನಬೇಕು
ವ್ಯಾಪಾರವ ಬಿಡಬೇಕು
ಪಾಪ ರಹಿತ ನಾಗಲಿಬೇಕು

ಜ್ಞಾನದ ದೀಪದ ಬೆಳಕಿನಲಿ ಓಡ್ಯಾಡಬೇಕು, ಹೆಮ್ಮಾಗಲೀ, ಗಂಡಾಗಲೀ, ಆಳಾಗಲೀ, ಅರಸಾಗಲಿ ಮುಕ್ತಿ ಸಾಧಕರಿಗೆ ಈ ನಡೆ ಬೇಕೇಬೇಕು.

ಸಾಮಾಜಿಕ ನಿಲುವು : ಪುರಂದರ ದಾಸರು. ಹರಿದಾಸರಾದ ಮೇಲೆ ಉಂಛ ವೃತ್ತಿ (ಮಧುಕರ ವೃತ್ತಿ)ಯನ್ನು ಅನುಸರಿಸಿದರಷ್ಟೇ, ಇವರಿಗೆ ಉಪ್ಪಿನಿಂದ ಹಿಡಿದು ಅರಿವೆಯ ವರೆಗೆ ಈ ಮಧುಕರ ವೃತ್ತಿಯಿಂದಲೇ ಬರಬೇಕಿತ್ತು. ಇವರುಗಳು ಯಾವುದೇ ಉದ್ಯೋಗ ಮಾಡಕೂಡದು. ಇವರು ಮನೆ ಮನೆಗೆ ಹೋಗಿ ಬೇಡಿ ತರುವುದು ಸಿದ್ಧ ಮಾಡಿದ ಆಹಾರ ನನ್ನಲ್ಲ. ಅಕ್ಕಿ ಬೇಳೆ ಇವುಗಳನ್ನು ಮಾತ್ರ ತರಬೇಕು. 'ಸಾಲದೆಂದೆನೆನು. ನಾಳಿಗೆ ಇಡೆನು' ಇದು ಹರಿದಾಸರ ನಿಲುವು. ಒಬ್ಬರ ಹಂಗಿರದ ಸರಳವಾದ ಹಾಗೂ ಸ್ವಚ್ಛ ಬದುಕು. ಬಾಳಿ ಸಮಾಜಕ್ಕೆ ಮಾದರಿಯಾಗಿ, ಸಮಾಜವನ್ನು ಸನ್ಮಾರ್ಗಕ್ಕೆಳೆಯುವ ಕೆಲಸ ಮಾಡಬೇಕಿತ್ತು ಇದನ್ನು ಹರಿದಾಸರಿಗೆ ವಿಧಿಸಿದವರು. ವ್ಯಾಸರಾಯ ಸ್ವಾಮಿಗಳು. ವ್ಯಾಸಕಾರ್ಯ ಆಶೋತ್ತರಗಳನ್ನು ಹರಿದಾಸರಾಗಿ. ಸಮರ್ಪಕವಾಗಿ ನಿರ್ವಹಿಸಿ ತಮ್ಮ ಗುರುಗಳಾದ ವ್ಯಾಸರಾಯರಿಂದ 'ದಾಸರೆಂದರೆ ಪುರಂದರದಾಸ್‌ರಯ್ಯಾ' ಎಂದು ಹೊಗಳಿಸಿಕೊಂಡವರು ಪುರಂದರ ದಾಸರು. ಇವರು ಸಂಸಾರವನ್ನು ತ್ಯಜಿಸಿದವರೆಲ್ಲಾ ಸಂಸಾರವನ್ನು ಅಲ್ಲಗಳೆದವರಂತೂ ಅಲ್ಲವೇ ಅಲ್ಲ. `ಸಂಸಾರವೆಂಬಂಥ ಭಾಗ್ಯ ವಿರಲಿ ಕಂಸಾರಿನೆನೆವಂಥಾ ಸೌಭಾಗ್ಯ ವಿರಲಿ` ಎಂತಲೂ 'ಜಗದೀಶನೇ ವಿಶ್ವಸಂಸಾರಿಯಾಗಿರಲು ಅಣಕಿಸದಿರು ಮಾನವಾ ಸಂಸಾರವಾ' ಎಂದು ಸಂಸಾರದ ಹೆಗ್ಗಳಿಕೆಯನ್ನು ತಿಳಿಸಿದವರು. ಸಂಸಾರಿಯಾಗಿದ್ದೂ ಕೂಡ ಮೋಕ್ಷ ಸಾಧಿಸುವುದು ಸಾಧ್ಯವೆಂದೂ ಸಂಸಾರದಲ್ಲಿ ಅಂಟಿ ಅಂಟದ್ಹಾಂಗಿರಬೇಕೆಂದೂ ಭೋದಿಸಿದರು. ಹರಿದಾಸರನ್ನು ಸಂಸಾರಿ ಸನ್ಯಾಸಿಗಳೆಂದೂ, ವಿರಕ್ತ ಜೀವಿಗಳೆಂದೂ ಪ್ರೋ. ರಾಮಚಂದ್ರರಾವ್ ತಮ್ಮ `ಪುರಂದರ ಸಾಹಿತ್ಯ`ದಲ್ಲಿ ವರ್ಣಿಸಿದ್ದಾರೆ. ಹರಿದಾಸರು ಜೋಳಿಗೆ ಹಿಡಿದು ಮನೆ ಮನೆಗೆ ನಡೆಸಿದರು. ಇದು ಭಿಕ್ಷೆಬೇಡಲೆಂದಲ್ಲ ಹಸಿದಮನಗಳಿಗೆ; ಹಸಿದ ಹೃದಯಗಳಿಗೆ ಭಗವದನುರಾಗದ ಭಿಕ್ಷೆ ನೀಡಲೆಂದು ಎಂದಿದ್ದಾರೆ. ಡಾ. ಪ್ರಭು ಶಂಕರ ತಮ್ಮ 'ಕನ್ನಡದಲ್ಲಿ ಭಾವಗೀತೆಗಳು' (ಪುಟ 187)

ಪುರಂದರ ದಾಸರು ಸಮಾಜದಲ್ಲಿದ್ದುಕೊಂಡೇ ಶ್ರೀಮಂತರ, ರಾಜರ ಓಲೆಕೋಲೆಗಳನ್ನು 'ಕಾಯಲಾರೆ ಕೃಷ್ಣಾ ಕಂಡವರ ಬಾಗಿಲನು' ಎಂತಲೂ 'ಕಲ್ಲು ಕರಗಿಸಬಹುದು ಹುರಿಗಡಲೆಯಲಿ ತೈಲವ ತೆಗೆದುಣಬಹುದು ಬಲ್ಲಿದರಾ ಮನೆ ಬಾಗಿಲ ಕಾಯಲಾರೆ' ಎಂದು ಮಾರ್ಮಿಕವಾಗಿ ಹಾಡುತ್ತಾ ಶ್ರೀಮಂತರ, ರಾಜರ ಆಶ್ರಯ ಬಯಸದಿದ್ದವರು. ಸಮಾಜದಲ್ಲಿ ಮನುಷ್ಯ, ನೂರಾರು ಕೋಟಲೆಗಳನ್ನೂ, ಸಾವು ನೋವು, ರೋಗ ರುಜಿನ, ಬಡತನ, ಮಾನಾಪ ಮಾನಗಳನ್ನು ಸಹಿಸಬೇಕಾಗುತ್ತದೆ. ಅಂತಹ ಸಂದರ್ಭದಲ್ಲಿ ಭಕ್ತಿಯ ಊರೆಗೋಲು. ಪಾರಮಾರ್ಥಿಕ ಮಾರ್ಗದರ್ಶನ ಮಾಡಿ ಅವನು ತನ್ನ ನ್ಯೂನತೆಗಳನ್ನು ತಿದ್ದಿ ಕೊಳ್ಳುತ್ತಾ, ಬರುವ ಕಷ್ಟಗಳನ್ನು ಸಮರ್ಥವಾಗಿ ಎದುರಿಸುವ ಶಕ್ತಿ ಪಡೆದು ಪುಟವಿಟ್ಟ ಚಿನ್ನ ದಂತಾಗಬೇಕು. ಇದೇ ದಾಸರ ಉದ್ದೇಶ. (ಎಲ್ಲರೂ ಮಾಡುವುದು ತುತ್ತು ಹಿಟ್ಟಿಗಾಗಿ ಗೇಣು ಬಟ್ಟೆಗಾಗಿ' ಎಂಬ ಕಟು ಸತ್ಯ. ದಾಸರಿಗೂ ಗೊತ್ತು ಆದರೆ ಈ ತುತ್ತು ಹಿಟ್ಟು, ಗೇಣು ಬಟ್ಟೆಯನ್ನು ಸಂಪಾದಿಸುವಾಗ, ವಂಚನೆ, ನೀಚತನ, ಮೋಸ ಮಾಡಿ ಸಂಪಾದಿಸುವುದು ಸಲ್ಲದು ಎಂಬ ಹಿಚವಚನ ದಾಸರದು. ಮನುಷ್ಯನಿಗೆ ದೇವರು ವಾಕ್ ಶಕ್ತಿ, ಆಲೋಚನಾ ಶಕ್ತಿಯನ್ನು ಮಿಕ್ಕ ಪ್ರಾಣಿಗಳಿಗೆ ಕೊಡದೆ ಇವನಿಗೆ ಕೊಟ್ಟಿರುವಾಗ. ಇವನಿಗೆ ಯುಕ್ತಾಯುಕ್ತ ಪ್ರಜ್ಞೆ ಇರಬೇಡವೇ? ಇವನು ತನ್ನ ಮಾನವ ಜನ್ಮವನ್ನು ಸಾರ್ಥಕ ಪಡಿಸಿಕೊಳ್ಳಬೇಡವೇ? ಅದಕ್ಕೆ ಅವರು 'ಮಾನವ ಜನ್ಮ ದೊಡ್ಡದು ಅದ ಹಾನಿ ಮಾಡಲಿ ಬೇಡಿ ಹುಚ್ಚಪ್ಪಗಳಿರಾ' ಎಂದು ವಿವೇಕ ಹೇಳಿದ್ದಾರೆ. ಇಲ್ಲವಾದರೆ 'ಕುರುಡು ನಾಯಿ ತಾ ಸಂತೆಗೆ ಬಂತಂತೆ, ಖಂಡ ಸಕ್ಕರೆ ಹಿತವಿಲ್ಲ ವಂತೆ, ತುಂಡು ಎಲುಬು ಕಡಿದೀತಂತೆ, ಹೆಂಡಿರ ಮಕ್ಕಳನೆಚ್ಚೀತಂತೆ, ಕೊಂಡು ಹೋಗುವಾಗ ಯಾರಿಲ್ಲವಂತೆ' ಎಂದು ಹಾಡಿ ಮಾನವ ಜನ್ಮವನ್ನು ಸಾರ್ಥಕ ಪಡಿಸಿ ಕೊಳ್ಳದಿದ್ದಲ್ಲಿ ಮಂಗನಕೈಯ್ಯ ಮಾಣಿಕ್ಯದಂತಾದೀತು ಎಂದಿದ್ದಾರೆ. ಸಮಾಜ ಸುಧಾರಣೆಗೆ ಕಂಕಣಕಟ್ಟಿದ ಇವರು, ಸನ್ಮಾರ್ಗ ಸಚ್ಛಾರಿತ್ಯ, ಸತ್ಯ ಸಂಧತೆ, ಪರಿಶುದ್ಧ ಜೀವನ ಇವುಗಳು ಪರಿಮಾತ್ಮನನ್ನು ಕಾಣಲು ಸರಿಯಾದ ಮಾರ್ಗವೆಂದು ಬೋಧಿಸಿದರು. ಕುಲ ಕುಲವೆಂದು ಬಡಿದಾಡುತ್ತಿದ್ದ ಸಮಯದಲ್ಲಿ ದಾಸರು. ಧೈರ್ಯದಿಂದ ಕುಲವಾಗಲೀ, ವಿದ್ಯೆಯಾಗಲೀ, ಯಾವನೊಬ್ಬನ ಹಿರಿಮೆಗೆ ಕಾರಣವಾಗದು ಎಂದು ಹೇಳುವ ಧೈರ್ಯ ಮಾಡಿದರು. ಸಮಾಜದಿಂದ ದೂರವಿರಿಸಿದ ಹೊಲೆಯನ ಬಗ್ಗೆ ಅವರ ಅಭಿಪ್ರಾಯ ಈ ರೀತಿ ಇದೆ.

'ಕೇಳಿದ ಶಾಸ್ತ್ರ ತಿಳಿಯದವ
'ಆಳಾಗಿ ಅಸನಗೆ ಮಣಿಯದವ
'ಇದ್ದು ದಾನವ ಮಾಡದವ
'ಆಶೆಯಿಂದ ಬಹಳ ದೋಶ ಮಾಡುವವ
'ಹುಸಿಯಾಡುವವ
'ಉಂಡ ಮನೆಗೆ ಎರಡು ಯೋಚಿಸುವಾತ
ಗಂಡ ಹೆಂಡಿರೊಳು ಭೇದ ವಿಕ್ಕುವವ
'ಗುರು ಹಿರಿಯರನ್ನು ಕಂಡು ಎರಗದಾತ.

ಇವರೆಲ್ಲಾ ಹೊಲೆಯರೆಂದು ದಾಸರ ಮತ ಬ್ರಾಹ್ಮಣನೆಂದರೆ ಬ್ರಾಹ್ಮನ ತಿಳಿದವನು ಅವನೀಗ ಬ್ರಾಹ್ಮಣನೋ' ಎಂದಿದ್ದಾರೆ. ಈ ಕೃತಿಯಲ್ಲಿ ಕಾಣಿಸಿರುವ ಲಕ್ಷಣಗಳನ್ನು ಗಮನಿಸಿದರೆ ಆಧ್ಯಾತ್ಮ ಯೋಗದಲ್ಲಿ ತೊಡಗಿರುವ ಸಚ್ಛಾರಿತ್ರ ವ್ಯಕ್ತಿಯೇ ಬ್ರಾಹ್ಮಣ. ಪ್ರಾಪಂಚಿಕ ಪ್ರಸಕ್ತಿಗಳನ್ನು ತಳೆದ ಚರಿತ್ರ ಹೀನನು ಬ್ರಾಹ್ಮಣನಲ್ಲ ಎಂದ ಮೇಲೆ ಯಾರು ಬೇಕಾದರೂ ಚರಿತ್ರವಂತರಾಗಿ ಆಧ್ಯಾತ್ಮಕ್ಕೆ ಒಲಿದು ಬ್ರಾಹ್ಮಣಾರಾಗಬಹುದು. ಹಾಗೇ ಸಾತ್ವಿಕ ತತ್ವವನ್ನು ದೂರೀಕರಿಸಿ ಹೊಲೆಯರೂ ಆಗಬಹುದು. ಜೀವಸ್ವರೂಪಕ್ಕೂ ಯೋಗ್ಯತೆಗಳಿಗೂ, ಕುಲ, ಜಾತಿಗಳಿಗೂ ಸಂಬಂಧವಿರದು ಎಂಬುದು ಇವರ ಮತ.

ಈ ಉಗಾಭೋಗವನ್ನು ಗಮನಿಸಿ.

ಹೊಲೆಯ ಬಂದನೆಂದು ಒಳಗೆ ದೇವರ ಮಾಡಿ
ಗಣ ಗಣ ಹಂಟೆ ಬಾರಿಸುವರಯ್ಯಾ
ತನುವಿನ ಕೋಪ ಹೊಲೆಯಲ್ಲವೇ ?
ಪರಧನ ಪರಸತಿ ಹೊಲೆಯಲ್ಲವೇ ?
ಹೊರಿಗಿದ್ದ ಹೊಲೆಯನ ಒಳಗೆ ಬಿಚ್ಚಿಟ್ಟರೆ,
ಇದಕೇನು ಮದ್ದೋ ಪುರಂದರ ವಿಠಲಾ ?

ಹೊಲೆಯನೆಂಬ ಶಬ್ದ ಜಾತಿ ಸೂಚಕ ಶಬ್ದ ಅಲ್ಲವೆಂದೂ. ಅದು ಭ್ರಷ್ಟಾಚಾರ ಸೂಚಕ ಶಬ್ದವೆಂದೂ ದಾಸರ ಮತ. ಪುರಂದ ದಾಸರ ಹಿರಿಮೆಯಷ್ಟೇ ಅವರ ವಿಚಾರದ ಹಿರಿಮೆಯೂ ಇದೆ. ಪುರಂದರದಾಸರ ಜೊತೆಗೆ ಹಲವರಿದ್ದಿರಬೇಕೆಂದು ಕಾಣುತ್ತದೆ. ವಿಜಯದಾಸರು ಈ ರೀತಿ ಬಣ್ಣಿಸಿದ್ದಾರೆ.

ಮದವೇರಿದ ಕರಿವಿಂಡಿನಂತೋ ದುರುಳ
ರೆ ದೆಯ ಮೆಟ್ಟಿ ದುಸ್ಸಂಗವನು ಜ
ರಿದು ಹರಿಸರ್ವೋತಮ ನೆಂದು ಕೂಗುತಲಿಹ
ರೀಡಾಡಿ ಓಡ್ಯಾಡಿ ಬೀದಿ ಬೀದಿಯೊಳಗೆ
ತಿರುಗುತ ಲಿಪ್ಪರು ಕರಿಗಳಂದದಲಿ"

ಎಂದಿದ್ದಾರೆ ವಿಜಯನಗರದ ಗೊಂದಲಮಯ ಪರಿಸ್ಥಿತಿಯಲ್ಲಿ ದಾಸರಿಗೆ ಜಾಣ್ಮೆ, ಧೈರ್ಯ ಎರದಿದ್ದರೆ ಉಳಿಕಾಲವಿರುತ್ತಿರಲಿಲ್ಲ. ಸಮಾಜದಲ್ಲಿ ಪುರಂದರ ದಾಸರು ಕಷ್ಟದ ಸಮಯದಲ್ಲಿ ದಿಟ್ಟತನದಿಂದ ನಿಂತುದೇ ಅಲ್ಲದೆ ಜನ ಸಮಾನ್ಯರಿಗೂ ಧೈರ್ಯ, ಸ್ಥೈರ್ಯವನ್ನು ತುಂಬಿದರು. (ಮುಂದುವರಿಯುವುದು)

# REMEMBERING MAHATMA GANDHI

★ 'An eye for an eye only ends up making the whole blind'

★ 'Hatred ever kills, love never dies, such is the vast difference between the two. What is obtained by love is retained for all time. What is obtained by hatred proves to be burden in reality, for it increases hatred.'

★ 'The moment there is suspicion a bout a person's motives, every thing he does becomes tainted.'

★ 'Intolerance is itself a from of violence and an obstacle to the growth of a true democratic spirit.'

★ 'If we want to cultivate a true spirit of democracy, we cannot afford to be intolerant. Intolerance betrays want of faith in one's cause.'

★ 'Power is of two kinds. One is obtained by fear punishment and the other by acts of love. Power based on love is a thousand times more effective and permanent than the one derived from fear of punishment.'

★ 'Love never claims, it ever gives. Love ever suffers, never resents, never revenges itself.'

★ 'If patience is worth anything , it must endure to the end of time. And a living faith will last in the midst of the blackest storm'

★ 'It has always been a mystery to me how men can feel themselves honoured by the humiliation of their fellow beings'

★ 'Where love is, there God is also'

★ Golden fetters are no loss galling to a self-respecting man than iron ones; the sting lies in the fetters, not in the metal.'

★ 'We may have our own private opinions but why should they be a bar to the meeting of hearts?'

★ 'Man becomes great exactly in the degree in which he works for the welfare of his fellow-men.'

★ "Courage has never been known to be a matter of muscle; it is a matter of the heart. The toughest muscle has been known to tremble before an imaginary fear. It was heart that set the muscle atrembling.'

★ 'When restraint and courtesy are added to strength, the later becomes irresistible.'

★ 'Manliness consists in making circumstances subserve to ourselves. Those who will not heed themselves perish. to understand this principle is not to be impatient, not to reproach fate, not to blame others. He who understands the doctrine of self-help blames himself for failure.'

★ 'I ll digested principles are, if any thing, worse than ill-digested food, for the latter harms the body and there is cure it, where as the former ruins the the soul and there is no cure for it.'

★ 'The essence of all religions is one. Only the approaches are different.'

★ 'Man's nature is not essentially evil. Brute nature has been known to yield to the influence of love. You must never despair of human nature.'

★ 'Providence has its appointed hour for every thing. We cannot command results. we can only strive.'

★ 'Rig'ts accrue automatically to him who duly performs his duties. In fact the right to perform one's duties is the only right that is worth living for and dying for. It covers all the legitimate rights. All the rest is grab under one guise or another and contains in it seed if himsa,'


★ 'It is good to see ourselves as others see us. Try as we may, we are never able to know ourselves fully as we are, especially the evil side of us. This we can do only if we are not angry with our critics, but will take in good heart whatever they might have to say.'

★ 'All compromise is based on give and take, but there can be no give and take on fundamentals. Any compromise on mere fundamentals is a surrender. For, it is all and no take.'

★ 'It is the law love of that rules the mankind. Had violence, i.e. hate, ruled us, we should have become extinct long ago. And yet, the tragedy of it is that the so-called civilized men and nations conduct themselves as if the basis of society was violence.'

★ 'An opponent is entitled to the same regard for his principles as we would

(Continued Page 11)



***We present here a compilation of quotes of Mahatma Gandhi***

# ಅಸೋಸಿಯೇಶನ್ನಿಲ್ಲಿ ಶ್ರೀ ಸ್ವರ್ಣಗೌರಿ ಮತ್ತು ಶ್ರೀ ಮಹಾಗಣಪತಿಯ ಉತ್ಸವ



ಆಗಸ್ಟ್ 25ರಂದು ಬೆಳಿಗ್ಗೆ ಅಸೋಸಿಯೇಶನ್ನಿನ ಸದಸ್ಯೆಯರು ಶ್ರೀ ಸ್ವರ್ಣಗೌರಿಯನ್ನು ಪೂಜಿಸುತ್ತಿರುವುದು.



ಶ್ರೀ ಸ್ವರ್ಣಗೌರಿ ಪೂಜೆಯಾದನಂತರ ಶ್ರೀ ಮಹಾಗಣಪತಿ ಪ್ರತಿಷ್ಠಾಪನೆ ಮಾಡಿ ಪೂಜೆ ಮಾಡಲಾಯಿತು.



ಉತ್ಸವದ ಅಂಗವಾಗಿ ಏರ್ಪಡಿಸಿದ್ದ ಸಾಂಸ್ಕೃತಿಕ ಕಾರ್ಯಕ್ರಮಲ್ಲಿ 26ರಂದು ಸಂಜೆ ಶ್ರೀಮತಿ ವಿಜಯಲಕ್ಷ್ಮೀನಾಥನ್ ಮತ್ತು ಅವರ ಶಿಷ್ಯೆ ಕವಿತಾ ನಾರಾಯಣ ಹಾಡುತ್ತಿರುವುದು.



ಆಗಸ್ಟ್ 27ರಂದು ಸಂಜೆ 'ಸಿಂಧು ಭೈರವಿ' ತಂಡದವರು ಶ್ರೀಮತಿ ಕೌಸಲ್ಯಾ ರಘುನಂದನ್ ಅವರ ನೇತೃತ್ವದಲ್ಲಿ ಭಕ್ತಿಗೀತೆಗಳನ್ನು ಹಾಡುತ್ತಿರುವುದು.




ಆಗಸ್ಟ್ 28ರಂದು ಸಂಜೆ ಮೈಸೂರಿನ ಶ್ರೀಮತಿ ಉಷಾರಾಜನ್ ಅವರಿಂದ ಕರ್ನಾಟಕಸಂಗೀತ ಪ್ರದರ್ಶಿಸಲಾಗಿತ್ತು. ಅವರ ಜೊತೆಯಲ್ಲಿ ಶ್ರೀ ಬಾಲಕೃಷ್ಣ ಅವರು ಪಿಟೀಲು ಮತ್ತು ಶ್ರೀ ಶ್ರೀಧರ್ ಪಾರ್ಥಸಾರಥಿ ಅವರು ಮೃದಂಗ ನುಡಿಸಿದರು.



ಆಗಸ್ಟ್ 29ರಂದು ಸಂಜೆ ಶ್ರೀಮತಿ ಶಂಪ ಪ್ರಕಾಶಿಯವರು ಹಿಂದೂಸ್ತಾನಿ ಶೈಲಿಯಲ್ಲಿ ಹಾಡಿದರು. ಅವರ ಜೊತೆಯಲ್ಲಿ ಅವರ ಶಿಷ್ಯೆಯರಾದ ಪ್ರಮೋದಿನಿರಾವ್ ಮತ್ತು ನಳಿನಿರಾವ್ ಹಾಡಿದರು.



ಸಾಂಸ್ಕೃತಿಕ ಕಾರ್ಯಕ್ರಮದ ನಂತರ ಪೂಜೆ, ಮಹಾಮಂಗಳಾರತಿಯಾಗಿ ಎಲ್ಲರೂ ದೇವರಿಗೆ ನಮಸ್ಕರಿಸುತ್ತಿರುವುದು.



ಶಂಕರ ಮಠದ ವೈದಿಕರು ವೇದಪಾರಾಯಣ ಮಾಡುತ್ತಿರುವುದು.



ಶ್ರೀಮತಿ ಸುಶೀಲಾ ಆಚಾರ್ಯ ಮತ್ತು ಸಂಗಡಿಗರಿಂದ ಭಕ್ತಿ ಗೀತೆಗಳು.



ಟ್ರಕ್ಕಿನ ಮೇಲೆ ಮಂಟಪವನ್ನಿಟ್ಟು ಅದರಲ್ಲಿ ಗಣೇಶ ಗೌರಿಯನ್ನು ಕೂರಿಸಿ, ದಾದರ್ ಕಡಲತೀರಕ್ಕೆ ಮೆರವಣಿಗೆ.



ದಾದರ್ ಕಡಲತೀರದಲ್ಲಿ ಗೌರಿ ಗಣೇಶನಿಗೆ ಪೂಜೆ.



ಮುಂದಿನ ವರ್ಷಬೇಗ ಬಾ ಯೆಂದು ಹೇಳುತ್ತಾ ಕಡಲ ತೀರದಲ್ಲಿ ಗೌರಿ ಗಣಪತಿಗೆ ವಿದಾಯ.

**Remembering Mahatma Gandhi**

*(contd. page from7)*

expect others to have for ours. Non-violence demands that we should seek every opportunity to win over opponents.'

★ 'Power invariably elects to go into the hands of the strong.' That strength may be physical or of the heart or, if we do not fight shy of the word, of the spirit. Strength of the heart connotes soul-force. Let it be remembered that physical force is transitory, even as the body is transitory, But the power of the spirit is permanent even the spirit is everlasting.'

★ 'Confession of errors is like a broom which sweeps away the dirt and leaves the surface brighter and cleaner. I feel stronger for confession.

★ 'Women is the companion of man, gifted with equal mental capacities. She has the right to participate in the minutest details in the activities of man, and she has an equal; right of freedom and liberty with him.'

★ 'The test of friendship is assistance in adversity, and that too, unconditional assistance. Co-operation which needs consideration is a commercial contract and not friendship. Conditional co-operation is like adulterated cement which does not bind.'

★ 'An error does not become truth by reason of multiplied propagation, nor does truth become error because nobody will see it.'

★ 'It is any day better to stand erect with a broken and bandaged head than to crawl on one's belly, in order to be to save one's head.'

★ 'Moral authority is never retained by any attempt to hold on to it. It comes without seeking and is retained without effort.'

★ 'I claim to be a simple individual liable to err like any other fellow mortal. I own, however, that I have the humility enough to confess my errors and to retrace my steps.'

★ 'A 'no' uttered from deepest conviction is better and greater than a 'yes; merely uttered to please or what is worse, to avoid trouble.'

★ 'Friendship that insists upon agreement on all matters is not worth the name. Friendship, to be real, must

*(Continued Page 15)*

# NATURE OF HAPPINESS

★ Ordinarily speaking, we say that we are happy when we get the thing we are longing for. At the time when we desire something, our mind is in a state of unrest; but when we get that thing, the state of unrest is replaced by a sense of peace.

Similarly, we say we are happy when we get rid of a thing which we loathed. At the time when we loathe something, our mind is restless; but when we get rid of that thing, our mind becomes calm. Therefore, happiness follows when a preceding state of unrest is ended.

Happiness is identical with the feeling of rest or peace. Only he who knows mental peace experiences true happiness. And to still the mind (i.e., remove all thoughts) is the aim of all spiritual practices.

★ The health which is not preceded by a sickness is more natural, perfect and permanent than the one which comes into being on the cessation of a sickness. Similarly, the happiness which is not preceded by a mental disturbance,, will be more natural, perfect and enduring than the one which follows a mental disturbance.

★ The Feeling of peace, contentment and happiness is inborn and ingrained in every one of us. If we neglect our inner happiness and seek for happiness in the outside world, we are seriously impairing our chances of getting it again in the next birth, for God will be quite justified in with holding a gift which the donee does not appreciate at its proper value when he has it with him.

★ Never let go your birthright of peace, contentment and happiness and never neglect to do your duty.

★ Make honest and sincere attempt to regain and retain your inner peace and happiness.

★ It is not within our power to obtain all the things desired by us or to get rid of all the things which trouble us. So it we depend on the external world for happiness we will only be slaves of circumstances. Our mind will always be in a state of unrest and true lasting happiness can never be experienced by us.

★ The number of things in the world that awaken desire is infinite. If a man gets a particular thing, the mental unrest caused by the longing for that thing may cease, but it will be replaced by restlessness caused by desire for another object. This process will go on forever as there is no end to desire.

Similarly, the number of things that are undesirable is also infinite. If you get rid of a particular undesirable object, no doubt you get mental peace for the moment; but the next moment you will become restless because another thing will start troubling you. this process will go on indefinitely as the things which give us trouble in the world are countless.


If, therefore, we seek to remove our mental unrest by trying to secure all the things which the mind asks for or to get rid of all things which disturb it, our search for peace will be an endless one and true everlasting peace and happiness will never be attained by us.

★ True peace and happiness is within you. Search within.


★ Spend your life in such a way that you do not in any way disturb your mental equilibrium or anybody else's equilibrium. Do not hurt yourself and do not hurt others.

*Courtesy* ***'Golden Words'***
*Teaching of H.H. Sri Chandrasekhara Bharathi*
*brought out by 'Tattvaloka'*

ಗುರುಕುಲದ ವಿವಿಧ ಚಿತ್ರಗಳು, ಹತ್ತಿರದಿಂದ.







# ಸತ್ಯವತಿ ಪ್ರಸನ್ನ

ಶ್ರೀಮತಿ ಸತ್ಯವತಿ ಪ್ರಸನ್ನ ಅವರ ಮನೆಗೆ ಗೋಕುಲಾಷ್ಟಮಿ ಪ್ರಯುಕ್ತ ಹೋದ ವರ್ಷ ಮೊದಲಬಾರಿಗೆ ಹೋಗಿದ್ದೆ. ತುಂಬಾ ಚೆನ್ನಾಗಿ ಅವರು ಶ್ರೀಕೃಷ್ಣನ ವಿವಿಧ ಮೂರ್ತಿಗಳನ್ನೂ ಫೋಟೋಗಳನ್ನೂ ಜೋಡಿಸಿದ್ದುದ್ದು ಕಂಡು



ಶ್ರೀಮತಿ ಸತ್ಯವತಿ ಪ್ರಸನ್ನ ಅವರ ಕಲಾಕೃತಿಯೊಂದಿಗೆ

ಸಂತೋಷವಾಯ್ತು. ಒಂದು ಕಡೆ ಅವರೇ ಸ್ವತಃ ಕೈಯಿಂದ ತಯಾರಿಸಿದ್ದ ಗೊಂಬೆಗಳನ್ನು ಸೇರಿಸಿ ಬ್ರಜಭೂಮಿ ಬೃಂದಾವನದಲ್ಲಿ ಶ್ರೀಕೃಷ್ಣ ಗೋಪಿಕೆಯರೊಡನೆ ರಾಸಕ್ರೀಡೆಯಲ್ಲಿ ತೊಡಗಿದ್ದಂತೆ ಪ್ರತಿಬಿಂಬಿಸಿದ್ದರೆ ಮತ್ತೊಂದು ಕಡೆ ಮಹಾರಾಷ್ಟ್ರದಲ್ಲಿ ಬಹಳ ಪ್ರಚಲಿತವಾಗಿರುವ `ಮೊಸರು ತುಂಬಿದ ಗಡಿಗೆ' ಯನ್ನು ಒಡೆಯಲು ಒಬ್ಬರ ಮೇಲೊಬ್ಬರು



ಕೃಷ್ಣ ಬಲರಾಮ ಗುರು ಸಂದೀಪನಿಯ ಗುರುಕುಲದಲ್ಲಿ

ಹತ್ತಿನಿಂತಿರುವಂತೆ ಕಾಣುವ ದೃಶ್ಯ ಬರುವಂತೆ ತಮ್ಮಲ್ಲಿದ್ದ ಅಂಬೆಗಾಲು ಕೃಷ್ಣನ ಬೆಳ್ಳಿ ಮೂರ್ತಿಗಳನ್ನು ಜೋಡಿಸಿದ್ದರು. ಅದಂತೂ ಬಹಳ ಮುದ್ದಾಗಿತ್ತು.

ಈ ವರ್ಷ ಹಬ್ಬದ ಪ್ರಯುಕ್ತ ಮತ್ತೆ ನನಗೆ ಅವರ ಕಲಾವಂತಿಕೆಯನ್ನು ಆನಂದಿಸುವ ಅವಕಾಶಸಿಕ್ಕಿತು. ಈ ಸಲಅವರು ಆರಿಸಿಕೊಂಡ ವಿಷಯ ಬಾಲಕ ಕೃಷ್ಣ ಸಂದೀಪನಿ ಮುನಿಗಳ ಆಶ್ರಮದಲ್ಲಿ ಇತರ ಬಾಲಕರೊಡನೆ ಆಶ್ರಮವಾಸಿಯಾಗಿ ಅಭ್ಯಾಸನಿರತನಾಗಿರುವುದು. ಈ ಸಲವೂ ಅವರು ತಮ್ಮಲ್ಲಿದ್ದ ಎಲ್ಲಾ ಶ್ರೀಕೃಷ್ಣ ಮೂರ್ತಿಗಳನ್ನೂ, ಫೋಟೋಗಳನ್ನು ಬೇರೆ ಬೇರೆ ವಿಧದಲ್ಲಿ, ಬೇರೆ ಬೇರೆ ಸ್ಥಾಯೀ ಭಾವದಲ್ಲಿ ಜೋಡಿಸಿದ್ದರು. ಇದೇ ಸಂದರ್ಭದಲ್ಲಿ ಅವರಲ್ಲಿ ಹುದುಗಿರುವ ಈ ಕಲಾವಂತಿಕೆ ಹಾಗೂ ಜಾಣ್ಮೆಯ ವಿಷಯದಲ್ಲಿ ಒಂದು ಚಿಕ್ಕ ಸಂದರ್ಶನವನ್ನು ಪಡೆಯುವ ಅವಕಾಶ ವನ್ನೂ ನೇಸರುವಿಗಾಗಿ ವಿನಂತಿಸಿ ಕೊಂಡಾಗ ಸತ್ಯವತಿ ಅವರು ತುಂಬಾ ಸಂಕೋಚಗೊಂಡರು. ತಮಗೆ ಪ್ರಚಾರ ಬೇಕಿಲ್ಲವೆಂದೂ, ಇದು ತಮ್ಮ ಸ್ವಸಂತೋಷಕ್ಕಾಗಿ ಆರಿಸಿಕೊಂಡ ಆಸಕ್ತಿಯೆಂದೂ ಸಂದರ್ಶನವನ್ನು ನಿರಾಕರಿಸಿದರು. ಅವರ ಜಾಣ್ಮೆಯಿಂದ ಪ್ರಭಾವಿತರಾದ ನಾವು ಪುನಃ ವಿನಂತಿಸಿಕೊಂಡಾಗ ಸಂಕೋಚದಿಂದಲೇ ಒಪ್ಪಿಕೊಂಡರು. ಸಂದರ್ಶನದ ಸಂಕ್ಷಿಪ್ತ ಮುಖ್ಯಾಂಶವು ಈ ಕೆಳಗಿನಂತಿದೆ.

ಶ್ರೀಮತಿ ಸತ್ಯವತಿ ಪ್ರಸನ್ನ ಅವರಿಗೆ ಮೊದಲಿನಿಂದಲೂ ಕುಸುರಿ ಕೆಲಸದಲ್ಲಿ ಬಹಳ ಆಸಕ್ತಿ. ಇದು ಅವರಿಗೆ ತಂದೆ ಯವರಿಂದ ಬಂದ ಕಲೆ. ಅವರ ತಂದೆ ಈಗಲೂ ಸಹ ಸೂಕ್ಷ್ಮವಾದ ಎಂಬ್ರಾಯಡರಿಯನ್ನು ದಿಂಬಿನ ಕವರ್ ಮುಂತಾದವುಗಳ ಮೇಲೆ ಮಾಡುತ್ತಿರುತ್ತಾರೆ. ಸತ್ಯವತಿ ಸಹ ಸೂಕ್ಷ್ಮವಾದ ಕ್ರಾಸ್ ಸ್ಟಿಚ್ ವರ್ಕ್‌ನಲ್ಲಿ ಗ್ರೀಟಿಂಗ್ ಕಾರ್ಡ್, ಫ್ಲವರ್ ಮೇಕಿಂಗ್, ಪೇಯಿಂಟಿಗ್, ಮುಂತಾದವುಗಳನ್ನು ಬಹಳ ಚೆನ್ನಾಗಿ ಮಾಡುತ್ತಾರೆ. ಸಿನೆಮಾ, ಟಿ. ವಿ. ಕಾಡು ಹರಟೆ ಇವುಗಳಲ್ಲಿ ಆಸಕ್ತಿ ಇಲ್ಲದ ಕಾರಣ ಅವರ ಕ್ರಿಯಾಶಕ್ತಿಯೆಲ್ಲಾ ಈ ರೀತಿಯಾಗಿ ಅಂತರಿಕವಾಗಿ





ಸತ್ಯವತಿಯವರು ಮಾಡಿದ ಇತರ ಕೃತಿಗಳು

ವಿಕಸಿತಗೊಳ್ಳಲು ಅವಕಾಶವಾಯ್ತು. ಮೊದಲೆಲ್ಲಾ ಕಲಿಯಲು ಆಸಕ್ತಿ ತೋರಿಸಿದವರಿಗೆ ಅವರು ತಮ್ಮಲ್ಲಿದ್ದ ಕಲೆಯನ್ನು ಮುಕ್ತವಾಗಿಯೇ ಕಲಿಸಿದರು. ಆದರೆ ಕಲಿತು ಹೋದವರು ಮತ್ತೆ ತಮ್ಮ ಮುಖವನ್ನು ಸಹ ತೋರಿಸುವ ಸಹೃದಯತೆಯನ್ನು ಇಟ್ಟುಕೊಳ್ಳದಿದ್ದ ಕಾರಣ ಈಗ ಅವರಿಗೆ ಕಲಿಸುವ ಆಸಕ್ತಿಯಿಲ್ಲವಾಗಿದೆ. ಹಾಗೆಂದು ಕಲಿಯಲು ಬರುವವರಿಗೆ ಇಲ್ಲವೆನ್ನುವುದಿಲ್ಲ.

ಈಗ ಹಲವು ವರ್ಷಗಳಿಂದ ಗೋಕುಲಾಷ್ಟಮಿಗೆ ಶ್ರೀಕೃಷ್ಣನ ಅಲಂಕಾರವನ್ನು ಕಲಾತ್ಮಕವಾಗಿ ಮಾಡುತ್ತಿದ್ದು, ಪ್ರತಿವರ್ಷವೂ ಶ್ರೀ ಕೃಷ್ಣನ ಜನ್ಮವೃತ್ತಾಂತಕ್ಕೆ ಸಂಬಂಧಿಸಿದಂತೆ ಬೇರೆ ಬೇರೆ ವಿಷಯವನ್ನು ಆರಿಸಿಕೊಂಡು ಅದರ ಸಾಕಾರ ಚಿತ್ರಣವನ್ನು ತಯಾರಿಸುವ ಹವ್ಯಾಸವನ್ನು ಬೆಳೆಸಿಕೊಂಡು ಬಂದಿದ್ದಾರೆ. ಇದಕ್ಕಾಗಿ ಇವರು ಉಪಯೋಗಿಸುವ ವಸ್ತುಗಳನ್ನು ಹೊರಗಿನಿಂದ ಕೊಂಡುತರುವುದಿಲ್ಲ. ಸಾಧಾರಣವಾಗಿ ಎಲ್ಲರ ಮನೆಗಳಲ್ಲೂ ಸಿಗುವ ವಸ್ತುಗಳನ್ನು ಉಪಯೋಗಿಸಿ ಕೊಂಡ ಅತ್ಯಂತ ಕಡಿಮೆ ಖರ್ಚಿನಲ್ಲಿ, ಅತ್ಯಂತ ಸುಂದರವಾಗಿ ಹಂದರವನ್ನು ನಿರ್ಮಿಸುವುದು ಇವರ ವೈಶಿಷ್ಟ್ಯ. ಇದೇ ಮೇಲೆ ಹೇಳಿದ ಸಂದೀಪನಿ ಆಶ್ರಮದ ಗುಡಿಸಲುಗಳನ್ನು ನಿರ್ಮಿಸುವಾಗ ಮೇಲಿನ ಚಪ್ಪರಕ್ಕೆ ಇವರು ಉಪಯೋಗಿಸಿದ ವಸ್ತು ಮುಸುಕಿನ ಜೋಳದ ಮೇಲಿನ ನಾವು ಎಸೆಯುವ ಸಿಪ್ಪೆ ಹಾಗೂ ಜೊಂಡು, ವ್ಯಕ್ತಿಗಳನ್ನು ಆಶ್ರಮವಾಸಿಗಳನ್ನು ತಯಾರು ಮಾಡಿರುವುದು ತಂತಿಯ ಚೂರು, ದಾರ ಹಾಗೂ ತುಂಡು ಬಟ್ಟೆಗಳಿಂದ, ಐಸ್‌ಕ್ರೀಮ್ ಕಡ್ಡಿಗಳು, ಹಲ್ಲು ಚುಚ್ಚುವ ಕಡ್ಡಿಗಳು, ಸಣ್ಣಸಣ್ಣ ಗಾಜಿನ ಶೀಶೆಗಳು, ಡಬ್ಬಿಯ ಮುಚ್ಚಳಗಳು, ಕಸಬರಿಕೆ ಕಡ್ಡಿಗಳು, ಪ್ಲಾಸ್ಟಿಕ್ ದಾರದ ತುಂಡುಗಳು ಇಂಥವೇ ಇವರ ಮುಖ್ಯಸಾಮಾಗ್ರಿಗಳು. ಇಲ್ಲಿನ ಒಂದು ಚಿತ್ರದಲ್ಲಿ ಕಾಣುವ ಅರ್ಜುನನ ರಥ ಚಕ್ರಕ್ಕೆ ಅವರು ಉಪಯೋಗಿಸಿರುವುದು ಮನೆಯ ಡಬ್ಬಿಯ ಮುಚ್ಚಳ.

ಇವರು 'ನಾರಾಯಣೀಯಮ್' ವ್ಯಾಖ್ಯಾನ ಮೂಲೆಯನ್ನು ಕೇಳುವುದಕ್ಕೆ ಆರಂಭಿಸಿದಾಗಿನಿಂದ ಹೀಗೆ ವಿಷಯ ಸಂಗ್ರಹಣೆ ಮಾಡಿ ಒಂದು ಬಗೆಯ ನೂತನತೆಯನ್ನು ತಮ್ಮ ಅಲಂಕಾರದಲ್ಲಿ ತರಲಾರಂಭಿಸಿದರು. ಗೋಕುಲಾಷ್ಟಮಿ ಇವರಿಗೆ ದೊಡ್ಡ ಹಬ್ಬ. ಆಗ ಶ್ರೀ ಕೃಷ್ಣನನ್ನು ವಿಧವಧವಾಗಿ ಅಲಂಕರಿಸಿ, ನೆಂಟರಿಷ್ಟರೊಂದಿಗೆ ದೇವರ ಆರತಿ ಮಾಡಿ ಸಂತೋಷಿಸುವುದು ಮೊದಲಿನಿಂದಲೂ ಮನೆತನಕ್ಕೆ ಹೊಂದಿಕೊಂಡು ಬಂದ ಕ್ರಮ. ಅದರಲ್ಲೀಗ ಸತ್ಯವತಿ ಅವರ ಕಲಾವಂತಿಕೆಯಿಂದ ಒಂದು ಹೊಸ ಆಯಾಮ ಸೇರಿ ಗೋಕುಲಾಷ್ಟಮಿಗೆ ಅವರ ಮನೆಗೆ ಹೋಗುವುದೆಂದರೆ ಭಾವಿಕರಿಗೆ ದೇವರ ದರ್ಶನವಾಗುವುದ ಜೊತೆಗೆ ಕಲಾರಸಿಕತೆಯ ಒಂದು ವಿಶಿಷ್ಟಾನುಭವವೂ ಆಗುತ್ತದೆ.

## PROGRAMME

On the Occasion of the Children's day there will be a Variety entertainment Programme presented by the members, children, at the Association on Saturday the 14th November 98 at 7-00 p.m.
Please attend with you family and encourage the young artists.
If your children want to participate or present any event, please contact Smt. Latha Raghu on Phone No.: 4345586 (R)



**NKES** ಶಾಲೆಯ ಅಧ್ಯಕ್ಷೆ ಹಾಗೂ ಅಸೋಸಿಯೇಷನ್ನಿನ ಉಪಾಧ್ಯಕ್ಷೆಯಾದ ಶ್ರೀಮತಿ ಲೀಲಾ ರಾಮಕುಮಾರ್ ಅವರು ಅಸೋಸಿಯೇಷನ್ನಿನ ಪರವಾಗಿ ಮುಂಬೈ ಬೋರ್ಡಿನಲ್ಲಿ ಪ್ರಥಮ ಸ್ಥಾನ ಗಳಿಸಿದ ಕು. ಸೀಮಾ ದೇವಾಡಿಗಳಿಗೆ ಪುರಸ್ಕಾರ ನೀಡುತ್ತಿರುವುದು.

# ಸುತ್ತಮುತ್ತ

## ಕನ್ನಡ ಸಂಘ ಸಂಸ್ಥೆಗಳಲ್ಲಿ ವಿನಂತಿ

ಕರ್ನಾಟಕ ಸಂಘವು ನವೆಂಬರ್ 8 ರಂದು ಬೆಳಗ್ಗೆ 10-00 ಗಂಟೆಯಿಂದ ಸಂಜೆ 6-00 ಗಂಟೆಯ ವರೆಗೆ ಮುಂಬಯಿ ಕನ್ನಡ ಶಿಕ್ಷಕರ ಸಮಾವೇಶವನ್ನು ಆಯೋಜಿಸಲು ನಿರ್ಧರಿಸಿದೆ. ಇದರಲ್ಲಿ ಮುಂಬಯಿಯಲ್ಲಿ ಪ್ರಾಥಮಿಕ ಶಾಲೆಗಳಿಂದ ಸಂಶೋಧನಾ ಹಂತದ ವರೆಗಿನ ಕನ್ನಡ ವಿದ್ಯಾರ್ಥಿಗಳು, ಶಿಕ್ಷಕರು, ಎದುರಿಸುವ ಸಮಸ್ಯೆಗಳನ್ನು ಸೇರಿದಂತೆ ಇನ್ನೂ ಅನೇಕ ವಿಷಯಗಳ ಕುರಿತು ಆ ಕ್ಷೇತ್ರದಲ್ಲಿ ಸೇವೆ ಸಲ್ಲಿಸಿ ಅಪಾರ ಅನುಭವ ಪಡೆದ ಮಹನೀಯರಿಂದ ಪ್ರಬಂಧಮಂಡನೆ ಮತ್ತು ಅವರೊಡನೆ ಚರ್ಚೆ ಮುಂತಾದ ಕಾರ್ಯಕ್ರಮಗಳು ನಡೆಯುವುವು. ಕೇವಲ ಶಾಲಾ ಕಾಲೇಜುಗಳಲ್ಲದೆ ಮುಂಬಯಿಯ ಅನೇಕ ಕನ್ನಡ ಸಂಘ ಸಂಸ್ಥೆಗಳೂ ಇಲ್ಲಿ ಕನ್ನಡ ಉಳಿಸಿ ಬೆಳೆಸುವ ಕಾರ್ಯಕ್ಕೆ ಕೈಜೋಡಿಸಿವೆ. ಕರ್ನಾಟಕ ಸಂಘದಂತೆ ಅನೇಕ ಇತರ ಸಂಘಸಂಸ್ಥೆಗಳೂ ಮುಂಬಯಿಯಲ್ಲಿ ಕನ್ನಡ ತರಗತಿಗಳನ್ನು ನಡೆಸುತ್ತಿರುವ ವಿಚಾರವೂ ನಮಗೆ ತಿಳಿದಿದೆ. ಪ್ರಸ್ತುತ ಸಮ್ಮೇಳನದ ದಿನ ಒಂದು ಗೋಷ್ಠಿಯಲ್ಲಿ `ಮುಂಬಯಿ ಕನ್ನಡ ಶಿಕ್ಷಣಕ್ಕೆ ಸಂಘ ಸಂಸ್ಥೆಗಳ ಕೊಡುಗೆ' ಎಂಬ ವಿಷಯದ ಕುರಿತೂ ಪ್ರಬಂಧ ಹಾಗೂ ಚರ್ಚೆಯನ್ನು ಆಯೋಜಿಸಲು ನಿರ್ಧರಿಸಿದ್ದು ಆ ಕುರಿತು ನಾವು ಎಲ್ಲ ಸಂಘ ಸಂಸ್ಥೆಗಳಿಂದ ವಿವರಗಳನ್ನು ಆಹ್ವಾನಿಸುತ್ತಿದ್ದೇವೆ. ಮುಂಬಯಿಯಲ್ಲಿ ಕನ್ನಡದ ಉಳಿವಿಗಾಗಿ ಮೌಲಿಕ ಸೇವೆ ಸಲ್ಲಿಸಿದಂಥ ಕನ್ನಡ ಸಂಘ ಸಂಸ್ಥೆಗಳು ದಯವಿಟ್ಟು ನಮಗೆ ಈ ಕೆಳಗಿನ ಮಾಹಿತಿಗಳನ್ನು ಆದಷ್ಟು ಬೇಗನೆ ಕಳುಹಿಸಿಕೊಡಬೇಕಾಗಿ ವಿನಂತಿ.

೧. ಸಂಸ್ಥೆ ಕನ್ನಡ ಅಥವಾ ಇತರ ವರ್ಗಗಳನ್ನು ನಡೆಸುತ್ತಿದ್ದರೆ ಅವುಗಳ ವಿವರ ಮತ್ತು ಅದಕ್ಕೆ ವಿದ್ಯಾರ್ಥಿಗಳ ಪ್ರತಿಕ್ರಿಯೆ.

೨. ವಿದ್ಯಾರ್ಥಿ ವೇತನ ನೀಡುತ್ತಿದ್ದರೆ ಯಾವ ರೂಪದಲ್ಲಿ (ನಗದು ರೂಪದಲ್ಲೇ ಅಥವಾ ಸಮವಸ್ತ್ರ ಮುಂತಾದ ರೂಪದಲ್ಲೇ) ಮತ್ತು ಇದಕ್ಕೆ ಸುಮಾರು ಎಷ್ಟು ರೂಪಾಯಿಗಳನ್ನು ವ್ಯಯಿಸುತ್ತದೆ ಮತ್ತು ಎಷ್ಟು ವರ್ಷಗಳಿಂದ ಕೊಡುತ್ತಿದೆ ?

೩. ಒಂದು ವೇಳೆ ಕೆಲವು ವರ್ಷಗಳ ಹಿಂದೆ ಇಂಥ ಚಟುವಟಿಕೆಗಳನ್ನು ಹಮ್ಮಿಕೊಂಡಿದ್ದು ಕಾರಣಾಂತರಗಳಿಂದ ಈಗ ಈ ಯೋಜನೆಯನ್ನು ಕೈಬಿಟ್ಟಿದ್ದರೆ ಆ ಕುರಿತವಿವರಗಳನ್ನೂ ನೀಡಬಹುದು.

ಇತರ ಯಾವುದೇ ಇಂಥ ಚಟುವಟಿಕೆಗಳಿದ್ದಲ್ಲಿ ಈ ಕೆಳಗಿನ ವಿಳಾಸಕ್ಕೆ ಬರೆದು ತಿಳಿಸಬೇಕಾಗಿ ವಿನಂತಿ.

Information officer, Karnataka Sangha, Dr. Visvesvaraya Memorial Bldg., Off. t. H. Kataria Marg, Mogul Lane, Near Matunga Road (W), Station, Mahim - Mumbai-400 016. Tel.: 43 77 022 / 43 79 645

## ಕಾರಂತೋತ್ಸವ - 98

ಮುಂಬಯಿಯ ಸದಾನಂದ ಸುವರ್ಣ ಸಾಂಸ್ಕೃತಿಕ ಪ್ರತಿಷ್ಠಾನವು ಇದೇ ಅಕ್ಟೋಬರ್ 10ರಿಂದ 15ರ ಅವಧಿಯಲ್ಲಿ ಜ್ಞಾನಪೀಠ ಪ್ರಶಸ್ತಿ ಪುರಸ್ಕೃತ ಡಾ। ಶಿವರಾಮ ಕಾರಂತರ ಹುಟ್ಟು ಹಬ್ಬದ ನಿಮಿತ್ತ (10-10-98) `ಕಾರಂತೋತ್ಸವ -98' ನ್ನು ಅರ್ಥಪೂರ್ಣವಾಗಿ ಆಚರಿಸುವ ಯೋಜನೆಯನ್ನು ಹಮ್ಮಿಕೊಂಡಿದೆ. ಮಹಾನಗರದ ಪ್ರತಿಷ್ಠಿತ ಸಂಸ್ಥೆಗಳಾದ ಗೋರೆಗಾಂವ್ ಕರ್ನಾಟಕ ಸಂಘ, ಬಿಲ್ಲವರ ಅಸೋಸಿಯೇಶನ್, ಕನ್ನಡ ಕಲಾಕೇಂದ್ರ ಹಾಗೂ ಬಿಎಸ್.ಕೆ.ಬಿ. ಅಸೋಸಿಯೇಶನ್‌ನ ಸಹಯೋಗ ಪಡೆಯುವ ಮೂಲಕ ನಗರದ ಬೇರೆ ಬೇರೆ ಸ್ಥಳಗಳಲ್ಲಿ ಕಾರ್ಯಕ್ರಮಗಳು ವ್ಯಾಪಕವಾಗಿ ಗಣಿಸುವ ದೃಷ್ಟಿಯಿಂದ ನಡೆಯುವಂತೆ ಈ ಯೋಜನೆಯನ್ನು ಸಂಘಟಿಸಲಾಗಿದೆ.

ತಾ. 10-10-98ರ ಸಂಜೆ 6-30ಕ್ಕೆ ಕರ್ನಾಟಕ ಸಂಘದ ವಿಶ್ವೇಶ್ವರಯ್ಯ ಸಭಾಗೃಹದಲ್ಲಿ ಕಾರಂತೋತ್ಸವ ಉದ್ಘಾಟನಾ ಕಾರ್ಯಕ್ರಮ ನಡೆಯುತ್ತದೆ. ಡಾ. ಎಚ್. ಕೃಷ್ಣ ಭಟ್ (ನಿರ್ದೇಶಕರು, ರಾಷ್ಟ್ರಕವಿ ಗೋವಿಂದ ಪೈ, ಸಂಶೋಧನ ಕೇಂದ್ರ, ಉಡುಪಿ) ಹಾಗೂ ಶ್ರೀಮತಿ ಬಿ. ಮಾಲಿನಿ ಮಲ್ಯ (ಡಾ। ಕಾರಂತರ ನಿಕಟವರ್ತಿ) ಸಮಾರಂಭದಲ್ಲಿ ಪಾಲುಗೊಳ್ಳಲಿದ್ದಾರೆ. 'ಕಾರಂತರು - ನಾನು ಕಂಡಂತೆ' ಎನ್ನುವ ಉಪನ್ಯಾಸ ಮಾಲಿಕೆ ವಿವಿದೆಡೆಗಳಲ್ಲಿ ನಡೆಯಲಿದ್ದು ಇದರಲ್ಲಿ ಡಾ। ಮಾರುತಿ ಶ್ಯಾನುಭಾಗ, ಶ್ರೀ ಜಯಂತ ಕಾಯ್ಕಿಣಿ,ಡಾ (ಶ್ರೀಮತಿ) ಮಣಿಮಾಲಿನಿ ಹಾಗೂ ಶ್ರೀ ಬಾಬು ಶಿವಪೂಜಾರಿ ಇವರು ಮಾತಾಡಲಿದ್ದಾರೆ. ಇದರೊಂದಿಗೆ ಕಾರಂತರ ಆತ್ಮಕಥನ 'ಹುಚ್ಚುಮನಸ್ಸಿನ ಹತ್ತು ಮುಖಗಳು' ಗ್ರಂಥವನ್ನು ಆಧರಿಸಿ ಶ್ರೀ ಸದಾನಂದ ಸುವರ್ಣರು ನಿರ್ಮಿಸಿ, ನಿರ್ದೇಶಿಸಿರುವ ಸಾಕ್ಷ್ಯ ಚಿತ್ರವನ್ನು ಪ್ರದರ್ಶಿಸಲಾಗುತ್ತದೆ.

ಡಾ. ಕಾರಂತರೇ ನಿರ್ದೇಶಿಸಿದ ಯಕ್ಷಗಾನ ಬ್ಯಾಲೆಗಳ ಪ್ರದರ್ಶನವನ್ನು ಹಮ್ಮಿಕೊಂಡಿದ್ದು ಅದರ ವಿವರ ಹೀಗಿದೆ. ಅಭಿಮನ್ಯು (12-10-98ರಂದು 6-30ಕ್ಕೆ ವಿಶ್ವೇಶ್ವರಯ್ಯ ಸಭಾಗೃಹದಲ್ಲಿ) ಭೀಷ್ಮ ವಿಜಯ (13-10-98ರಂದು 6-30ಕ್ಕೆ ವಿಶ್ವೇಶ್ವರಯ್ಯ ಸಭಾಗೃಹದಲ್ಲಿ), ಬಭ್ರುವಾಹನ (14-10-98ರಂದು 6-30ಕ್ಕೆ ವಿಶ್ವೇಶ್ವರಯ್ಯ ಸಭಾಗೃಹದಲ್ಲಿ), ಗಯ ಚರಿತ್ರೆ (15-10-98ರಂದು 6-30ಕ್ಕೆ ಗೋಕುಲ ಸಭಾಗೃಹ, ಸಯಾನ್)

ಉತ್ಸವದ ಅಂಗವಾಗಿ ವಿವಿಧ ವಯೋಮಾನದ ಮಕ್ಕಳಿಗಾಗಿ ನಗರದ ಬೇರೆ ಬೇರೆ ಸ್ಥಳಗಳಲ್ಲಿ ಚಿತ್ರಕಲಾ ಸ್ಪರ್ಧೆ ಕೂಡಾ ನಡೆಯಲಿದೆ.

## ಮುಂಬಯಿ ಕನ್ನಡ ಸಂಘದ ಆಶ್ರಯದಲ್ಲಿ ಸಂಭ್ರಮದ ಗಣೇಶೋತ್ಸವ

ಮುಂಬಯಿ ಕನ್ನಡ ಸಂಘ, ಮಾಟುಂಗ ಇದರ ಆಶ್ರಯದಲ್ಲಿ ಪ್ರತಿ ವರ್ಷದಂತೆ ಈ ವರ್ಷವೂ ಶ್ರೀ ಗಣೇಶೋತ್ಸವವನ್ನು ಆಚರಿಸಲಾಯಿತು. ತಾ. 26-8-98ರಿಂದ 28-8-98ರ ತನಕ ವಿವಿಧ ಧಾರ್ಮಿಕ, ಸಾಂಸ್ಕೃತಿಕ ಕಾರ್ಯಕ್ರಮಗಳೊಂದಿಗೆ ಆಚರಿಸಲಾಯಿತು. ತಾ. 26-8-98ರಂದು ಬೆಳಗ್ಗೆ 9-30ಕ್ಕೆ ವಿಗ್ರಹ ಪ್ರತಿಷ್ಠಾಪನೆ, ಸಂಜೆ ಗಂಟೆ 6-00ಕ್ಕೆ ಸಂಘದ ಸದಸ್ಯರಿಂದ ಭಜನೆ, ನಂತರ ಪೂಜೆ ಮತ್ತು ಮಂಗಳಾರತಿ ನಡೆಯಿತು.

ತಾ. 28-8-98ರಂದು ಸಂಜೆ ಗಂಟೆ 6-30ಕ್ಕೆ ಡೊಂಬಿವಿಲಿಯ ಅನುಜಾ ಮಹಿಳಾ ಸಂಘದ ಸದಸ್ಯೆಯರಿಂದ ಭಕ್ತಿ ಸಂಗೀತ ಕಾರ್ಯಕ್ರಮ ನಡೆಯಿತು. ಇದರಲ್ಲಿ ಶ್ರೀ ಸಾವಿತ್ರಿ ಮೂರ್ತಿ ಮತ್ತು ಶ್ರೀಮತಿ ತ್ರಿವೇಣಿ ಮೋಹನ್ ಮುಖ್ಯಸ್ತೆಯರಾಗಿ ಕಾರ್ಯ ನಿರ್ವಹಿಸಿದ್ದರು. ಈ ಸಮಾರಂಭಕ್ಕೆ ಮುಖ್ಯ ಅತಿಥಿಯಾಗಿ ಮುಂಬಯಿ ಅಂಚೆ ಇಲಾಖೆಯ ನಿವೃತ್ತ ಅಧಿಕಾರಿಯಾದ ಶ್ರೀ ಎನ್. ಡಿ. ಮೂರ್ತಿಯವರು ಆಗಮಿಸಿದ್ದರು. ಶ್ರೀ ಪಂಡಿತ ರಾಘವೇಂದ್ರಾಚಾರ್ಯ ಸಾಂಗ್ಲಿ, ವೇದ ಮೂರ್ತಿ ಶ್ರೀ ಅಚ್ಯುತ ಭಟ್ ಮತ್ತು ಶ್ರೀ ನರಸಿಂಹ ಭಟ್ಟರಿಂದ ವೇದಘೋಷ ನಡೆಸಿ ಮಹಾ ಮಂಗಳಾರತಿ ಆದ ಬಳಿಕ ಮಂಗಳ ಮೂರ್ತಿಯನ್ನು ಶಿವಾಜಿ ಪಾರ್ಕಿನ ಸಮುದ್ರ ತೀರದಲ್ಲಿ ವಿಸರ್ಜಿಸಲಾಯಿತು. ನಂತರ ಪ್ರಸಾದ ವಿನಿಯೋಗ ನಡೆಯಿತು.

## ಅ.ಸು.ಕೃ ಸ್ಮಾರಕ ಹೊರನಾಡ ಗ್ರಂಥರಚನೆ ಪುರಸ್ಕಾರಕ್ಕಾಗಿ ಕೃತಿಗಳ ಆಹ್ವಾನ

ಮುಂಬಯಿ : ಬೆಂಗಳೂರಿನ ಅ.ಸು.ಕೃಷ್ಣರಾವ್ ಸ್ಮಾರಕ ದತ್ತಿನಿಧಿಯಿಂದ ಮುಂಬಯಿಯ ಕರ್ನಾಟಕ

ಸಂಘವು ಪ್ರಸ್ತುತ ಸಾಲಿನಿಂದ ಪುಸ್ತಕ ಪ್ರಕಟಣೆಗಾಗಿ ಕೊಡಮಾಡುವ ರೂ. 10,000/- (ಹತ್ತು ಸಾವಿರ ರೂಪಾಯಿಗಳು ಮಾತ್ರ) ಸಹಾಯಧನಕ್ಕಾಗಿ ಯೋಗ್ಯ ಲೇಖಕರಿಂದ ಕೃತಿಗಳನ್ನು ಆಹ್ವಾನಿಸಲಾಗಿದೆ. ಹೊರನಾಡ ಕನ್ನಡಿಗರ ಜನಜೀವನ, ಸಮಸ್ಯೆಗಳಿಗೆ ಸಂಬಂಧಿಸಿದ ಇಲ್ಲವೇ ಕನ್ನಡದ ಖ್ಯಾತ ಕೃತಿಯೊಂದರ ಮರಾಠಿ, ಹಿಂದೀ, ಇಂಗ್ಲೀಷ್ ಮುಂತಾದ ಅನ್ಯ ಭಾಷೆಗಳ ಯಾರದೇ ಅನುವಾದಕ್ಕೆ ಈ ಬಹುಮಾನವನ್ನು ಕೊಡಲಾಗುವುದು. ಮುಖ್ಯವಾಗಿ ಗ್ರಂಥವು ಹೊರನಾಡ ಕನ್ನಡ - ಕನ್ನಡಿಗರಿಗೆ ಸಂಬಂಧಿಸಿದ್ದಿರಬೇಕು. ಪುರಸ್ಕಾರವು ವಿಮರ್ಶೆ ಮುಂತಾದ ವಿಚಾರ ಸಾಹಿತ್ಯಕ್ಕೆ ಸಲ್ಲುವುದೇ ವಿನಾ ಕಥೆ, ಕವನ, ಕಾದಂಬರಿ ಮುಂತಾದವುಗಳಿಗೆ ಸಲ್ಲುವುದಿಲ್ಲ. ಹೆಚ್ಚಿನ ಮಾಹಿತಿಗಾಗಿ ಈ ಕೆಳಗಿನ ವಿಳಾಸವನ್ನು ಸಂಪರ್ಕಿಸಬಹುದು.

Hon Gen. Secretary, Karnataka Sangha, Dr. Visvesvaraya Memorial Bldg., Off. T. H. Kataria Marg, Mogul Lane, Near Matunga Road (W), Station, Mahim - Mumbai-400 016. Tel.: 43 77 022 / 43 79 645

### ಸಂಗೀತ ವಿದ್ಯಾಲಯದ ಸಾಧನೆ

ಡೊಂಬಿವಲಿಯ ಮೈಸೂರು ಸಂಗೀತ ವಿದ್ಯಾಲಯವು ಕರ್ನಾಟಕ ಸರಕಾರದ, ಪ್ರೌಢ ಶಿಕ್ಷಣ ಮಂಡಳಿಯವರು ನಡೆಸುವ ಕರ್ನಾಟಕ ಸಂಗೀತ ಪರೀಕ್ಷೆಗಳಿಗೆ ಪ್ರತಿ ವರ್ಷವೂ ಅಭ್ಯರ್ಥಿಗಳನ್ನು ಕಳುಹಿಸುತ್ತಿದ್ದು, ಈ ವರ್ಷ 5

ಅಭ್ಯರ್ಥಿಗಳನ್ನು ಕಳುಹಿಸಿದ್ದು ಎಲ್ಲಾ ಅಭ್ಯರ್ಥಿಗಳೂ ಪ್ರಥಮ ದರ್ಜೆ ಉತ್ತಮ ಶ್ರೇಯಾಂಕದೊಂದಿಗೆ ತೇರ್ಗಡೆಯಾಗಿದ್ದಾರೆಂದು ಪ್ರಕಟಣೆ ತಿಳಿಸುತ್ತದೆ. ಜೂನಿಯರ್ ವಿಭಾಗದಲ್ಲಿ ಕುಮಾರಿರಾದ ಸವಿತಾ ನಾಗರಾಜ್, ಶ್ರೀ ವಿದ್ಯಾ ಮತ್ತು ಶ್ರೀಮತಿ ಗಿರಿಜಾ ನಂಬೀಶ್ (ವೀಣೆ) ಸೀನಿಯರ್ ವಿಭಾಗದಲ್ಲಿ ಕುಮಾರಿಯರಾದ ಸೌಮ್ಯ ರಾಘವ ರತ್ನ ಮತ್ತು ಜಯಲಕ್ಷ್ಮೀ ಗಣೇಶ್ ತೇರ್ಗಡೆಯಾದ ವಿದ್ಯಾರ್ಥಿಗಳು.

### 'ಗುಣಗ್ರಾಹಿ' ಮಾಸ ಪತ್ರಿಕೆ

ಸಂಗೀತ ನೃತ್ಯ ಕಲೆಗಳ ಅಭಿವೃದ್ಧಿಗಾಗಿ ಮೀಸಲಾಗಿರುವ 'ಗುಣಗ್ರಾಹಿ' ಆಂಗ್ಲ ಮಾಸಿಕ ಪತ್ರಿಕೆಯು ಕಳೆದ ತಿಂಗಳು ಕರ್ನಾಟಕ ರಾಜಧಾನಿ ಬೆಂಗಳೂರಿನಲ್ಲಿ ನ್ಯಾಯಧೀಶ, ಎಫ್.ಎಂ. ಸಲ್ದಾನರವರಿಂದ ಬಿಡುಗಡೆಯಾಯಿತು. ಕರ್ನಾಟಕ ಮತ್ತು ಸಂಸ್ಕೃತಿ ಇಲಾಖೆ ಕಾರ್ಯದರ್ಶಿಗಳಾದ ಚಂದ್ರಹಾಸಗುಪ್ತರವರು ಮುಖ್ಯ ಅತಿಥಿಗಳಾಗಿದ್ದರು. ಸಂಗೀತ ಮತ್ತು ನೃತ್ಯ ವಿಮರ್ಶಕ ಡಾ. ಎಂ. ಸೂರ್ಯ ಪ್ರಸಾದ್‌ರವರು ಪ್ರಧಾನ ಸಂಪಾದಕರಾಗಿರುವ ಈ ಪತ್ರಿಕೆಯು ಕಲಾರಂಗದಲ್ಲಿ ರಾಷ್ಟ್ರೀಯ ಮತ್ತು ಅಂತರ ರಾಷ್ಟ್ರೀಯ ಮಟ್ಟದ ಕರ್ನಾಟಕದ ಏಕೈಕ ಆಂಗ್ಲ ಮಾಸಿಕ ಪತ್ರಿಕೆಯಾಗಿದೆ. ಸಂಗೀತ ನೃತ್ಯ ಕಾರ್ಯಕ್ರಮಗಳ ಸುದ್ದಿ, ವಿಮರ್ಶೆ, ಕಲಾವಿದರ ಪರಿಚಯ, ಯುವ ಪ್ರತಿಭೆಯ ಪ್ರೋತ್ಸಾಹ, ವಿದ್ವಾಂಸರುಗಳಿಂದ ವಿದ್ವತ್ಪೂರ್ಣ ಲೇಖನಗಳನ್ನೊಳಗೊಂಡ ಈ ಪತ್ರಿಕೆಗೆ ಶ್ರೀ ನಾಗಭೂಷಣ್‌ರವರು ಮುಂಬಯಿನ ಪ್ರತಿನಿಧಿಯಾಗಿ ಆಯ್ಕೆಯಾಗಿದ್ದಾರೆ.

### ಪಂತನಗರ ಮುನ್ಸಿಪಲ್ ಕನ್ನಡ ಶಾಲೆ

ವಿದ್ಯಾರ್ಥಿಗಳನ್ನು ಯೋಗ್ಯರನ್ನಾಗಿ ರೂಪಿಸುವಲ್ಲಿ ಪಾಲಕರ ಹೊಣೆಗಾರಿಕೆ ಹೆಚ್ಚಾಗಿದೆ. ತಾಯಂದಿರು ಮಕ್ಕಳನ್ನು ವಿದ್ಯಾಭ್ಯಾಸದತ್ತ ಮನವೊಲಿಸುವಲ್ಲಿ ಕ್ರಿಯಾಶೀಲರಾಗಿರಬೇಕು. ಸುಸಂಸ್ಕೃತ ವಿದ್ಯಾವಂತರೇ ನಮ್ಮ ದೇಶದ ಬೆನ್ನೆಲುಬು, ಅವರಲ್ಲಿ ಅಂತರಂಗ ಪರಿಶುದ್ಧತೆಯನ್ನುಂಟು ಮಾಡುವ ಕೆಲಸ ಈಗ ಅಗತ್ಯವಾಗಿದೆಯೆಂದು ಸೋಮಯ್ಯ ಕಾಲೇಜಿನ ಕನ್ನಡ ವಿಭಾಗದ ಮುಖ್ಯಸ್ಥರಾಗಿರುವ ಡಾ. ಸಂಜೀವ ಶೆಟ್ಟಿ ಅವರು ಸಮವಸ್ತ್ರ ವಿತರಣಾ ಸಮಾರಂಭದ ಮುಖ್ಯ ಅತಿಥಿಯಾಗಿ ಮಾತಾಡುತ್ತಿದ್ದರು. ಇದೇ ಸಮಯದಲ್ಲಿ ನೂತನವಾಗಿ ಸ್ಥಾಪನೆಗೊಂಡ ಸ್ಕೌಟುದಳದ ದೀಕ್ಷಾ ಸಮಾರಂಭವನ್ನು ಡಾ. ಶೆಟ್ಟಿ ಅವರು ನೆರವೇರಿಸಿದರು.

ಕನ್ನಡ ಭಾಷೆಯನ್ನು ಮುಂಬಯಿಯಲ್ಲಿ ನಾವು ಬೆಳೆಸಬೇಕು. ಶಿಸ್ತು ಬದ್ಧ ಜೀವನವನ್ನು ನಡೆಸಬೇಕೆಂದು ಶ್ರೀ ಆದಿಶಕ್ತಿ ಕನ್ನಡ ಶಾಲೆಯ ಅಧ್ಯಕ್ಷರಾದ ಶ್ರೀ ಉಳ್ಳೂರುಗುತ್ತು ವಾಮನ ಕೆ. ಶೆಟ್ಟಿ ಅವರು ಅತಿಥಿ ಸ್ಥಾನದಿಂದ ಹೇಳಿದರು.

ಕನ್ನಡ ಸಮಾಜ ಸೇವಕರು ಬಡವಿದ್ಯಾರ್ಥಿಗಳಿಗೆ ಸಮವಸ್ತ್ರ ಪುಸ್ತಕಗಳನ್ನು ವಿತರಿಸುವುದು ತುಂಬಾ ಪ್ರಯೋಜನಕಾರಿ ಕೆಲಸವಾಗಿದೆ. ವಿದ್ಯಾರ್ಥಿಗಳು ಕಷ್ಟಪಟ್ಟು ಓದಬೇಕೆಂದು ಮ.ನ.ಪಾ. ಕನ್ನಡ ವಿಭಾಗದ ನಿರೀಕ್ಷಣಾ ಅಧಿಕಾರಿಣಿ ಶ್ರೀಮತಿ ಶಾರದಾ ಶೆಟ್ಟಿಯವರು ಅಧ್ಯಕ್ಷಸ್ಥಾನದಿಂದ ಘೋಷಿಸಿದರು.

ಈ ಸಮಾರಂಭಕ್ಕೆ ಮುಖ್ಯ ಅತಿಥಿಗಳಾಗಿ ಖ್ಯಾತ ಸಮಾಜ ಸೇವಕ 'ಅಕ್ಷ'ದ ಮೂಲಕ ಶ್ರೀ ಸುಂದರ ಪಿ. ಶೆಟ್ಟಿ ಅವರು ಶ್ರೀಮತಿ ಗುಲಾಬಿ ಶೆಟ್ಟಿ, ಶ್ರೀ ಶೀನ ಶೆಟ್ಟಿ ಇವರುಗಳು ವೇದಿಕೆಯಲ್ಲಿ ಉಪಸ್ಥಿರಿದ್ದು ಸಮವಸ್ತ್ರ ವಿತರಣೆ ಮಾಡಿದರು.

ಶಾಲೆಯ ಮುಖ್ಯೋಪಾಧ್ಯಾಯಿನಿ, ಶ್ರೇಷ್ಠ ಶಿಕ್ಷಕಿ ಪ್ರಶಸ್ತಿ ವಿಜೇತ ಶ್ರೀಮತಿ ಲೀಲಾವತಿ ಕೆ. ಶೆಟ್ಟಿಯವರು ಅಭ್ಯಾಗತರನ್ನು ಸ್ವಾಗತಿಸಿದರು. ಶಿಕ್ಷಣ ಮಲ್ಲನಾಥ ಜಲದಯವರು ಕಾರ್ಯಕ್ರಮವನ್ನು ನಿರ್ದೇಶಿಸಿದರು.

ಮಲ್ಲಿನಾಥ ಗಡೇಹ, ಸುಶೀಲ ಐಲ್, ಫಿಲೋಮಿನಾ ಫೆರ್ನಾಂಡಿಸ್, ಚಿತ್ರಾ ಗಾಂವಕರ್, ಲೀಲಾ ಸಿಕ್ವೇರಾ ಇವರುಗಳು ಕಾರ್ಯಕ್ರಮದ ಯಶಸ್ಸಿಗೆ ಶ್ರಮಿಸಿದರು.

### ಶ್ರೀಮತಿ ಸುಶೀಲಾ ಎಸ್. ಶೆಟ್ಟಿ ಸ್ಮಾರಕ ಕಥಾ ಪ್ರಶಸ್ತಿ ಮತ್ತು ಕವಿತಾ ಪ್ರಶಸ್ತಿ.

ಮುಂಬಯಿ ಸಾಹಿತ್ಯಕ, ಸಾಂಸ್ಕೃತಿಕ, ಸಾಂಘಿಕ, ಚಟುವಟಿಕೆಗಳಲ್ಲಿ ಸದಾ ಕ್ರಿಯಾಶೀಲರಾಗಿದ್ದು, ಮುಂಬಯಿಯ ಕನ್ನಡ ಸಾಹಿತ್ಯಲೋಕ ಬಹಳಷ್ಟನ್ನು ನಿರೀಕ್ಷಿಸುತ್ತಿದ್ದಾಗಲೇ ಇಹದ ಲೋಕವನ್ನು ಮುಗಿಸಿದ ಶ್ರೀಮತಿ ಸುಶೀಲಾ ಎಸ್. ಶೆಟ್ಟಿಯವರ ಸ್ಮರಣಾರ್ಥ ಕಥೆ ಹಾಗೂ ಕವಿತಾ ಸ್ಪರ್ಧೆಗಳನ್ನು 1997ರಿಂದ ಆರಂಭಿಸಲಾಗಿದೆ. ಕನ್ನಡದ ಸಮಸ್ತ ಮಹಿಳೆಯರಿಗಾಗಿ ಆಯೋಜಿಸಲಾಗಿರುವ ಅಖಿಲ ಭಾರತ ಮಟ್ಟದ ಈ ಸ್ಪರ್ಧೆಯು ಎರಡು ವಿಭಾಗಗಳಲ್ಲೂ ಪ್ರತ್ಯೇಕವಾಗಿ ರೂ. ಮೂರು ಸಾವಿರ ನಗದು ಬಹುಮಾನ ಫಲಕ ಮತ್ತು ಪ್ರಶಸ್ತಿ ಪತ್ರಗಳನ್ನೊಳಗೊಂಡಿದೆ.

---

### Remembering Mahatma Gandhi

*(contd. page from 11)*

sustain the weight of honest differences, however sharp they be'

- ★ 'Intellect takes us along in the battle of life to a certain limit, but at the crucial moment it fails us. The faith transcends reason. It is when the horizon is the darkest and the human reason is beaten down to the ground that faith shines brightest and comes to our rescue'
- ★ 'What is true of the individual will be tomorrow true of the whole nation, if individuals will but refuse to lose heart and hope.'
- ★ Men often hesitate to make a beginning because they feel that the objective cannot be achieved in its entirety. This attitude of mind is precisely our greatest obstacle to progress - an obstacle that each man, if only he wills it, can clear away.

Regn. No. 040015/86
Regn. No. MH/by/NE121/98
Date of Posting : 2-11-98

**ಸಾಧನೆಯ ಸಂಕಲ್ಪಕ್ಕೆ... ಸಾಧನೆಯ ಸ್ಫೂರ್ತಿ**

ಸುಮಾರು 200 ವರ್ಷಗಳ ಬಂಧನದ ಸಂಕೋಲೆಯಲ್ಲಿ ಸಿಲುಕಿದ್ದ ಭರತಖಂಡವನ್ನು ಮುಕ್ತಿಗೊಳಿಸುವಲ್ಲಿ ನಡೆದ ಹೋರಾಟ ಒಂದು ಯಶೋಗಾಥೆ. ಐದು ದಶಕಗಳ ಹಿಂದೆ ನಡೆದ ಸ್ವಾತಂತ್ರ್ಯ ಚಳುವಳಿಯ ಮೌಲ್ಯಗಳು ಅಭಿಮಾನ ಮೂಡಿಸುವ ಮೈಲಿಗಲ್ಲುಗಳು. ಸ್ವಾತಂತ್ರ್ಯ ದೀಕ್ಷೆ ಪಡೆದು 52ನೇ ವರ್ಷಕ್ಕೆ ಕಾಲಿಡುತ್ತಿರುವ ಈ ಸಂದರ್ಭದಲ್ಲಿ ಈ ಕೀರ್ತಿಗೆ ಪಾತ್ರರಾದ ಮಹಾತ್ಮರನ್ನು ಸ್ಮರಿಸೋಣ. ಬಲಿಷ್ಠ ಭಾರತದ ನಿರ್ಮಾಣಕ್ಕಾಗಿ ಗುರುತಿಸಿಕೊಂಡಿರುವ ಆದ್ಯವಲಯಗಳಾದ ಶಿಕ್ಷಣ, ಕುಡಿಯುವ ನೀರು, ಕೃಷಿ, ವಸತಿ, ನೀರಾವರಿ, ಕೈಗಾರಿಕೆ, ಆರೋಗ್ಯ, ವಿಜ್ಞಾನ, ತಂತ್ರಜ್ಞಾನ ಮುಂತಾದ ಕ್ಷೇತ್ರಗಳಲ್ಲಿ ಆಗಿರುವ ಮಹತ್ತರ ಸಾಧನೆಗಳ ಅವಲೋಕನದೊಂದಿಗೆ ದಾಪುಗಾಲು ಹಾಕೋಣ. ಸ್ವತಂತ್ರ ಭಾರತದಲ್ಲಿ ಕನ್ನಡ ನಾಡು ಕಂಡ ಪ್ರಗತಿಯ ಸಿಹಿಯನ್ನು ಸವಿಯೋಣ.

ಬುದ್ಧ, ಬಸವಣ್ಣ, ಸ್ವಾಮಿ ವಿವೇಕಾನಂದ ಮಹಾತ್ಮಗಾಂಧಿ, ಅವರಿಂದ ಫೋಷಿತ ಡಾ. ಅಂಬೇಡ್ಕರಂತಹ ಮೇರು ಸದೃಶ ಚೇತನಗಳಿಗೆ ಜನ್ಮವಿತ್ತ ಈ ಭಾರತಖಂಡ ನಾಗರೀಕತೆಯ ಆರಂಭದಿಂದ ಸ್ವಾತಂತ್ರ್ಯ ಪೂರ್ವದವರೆಗೂ ತನ್ನ ಆದರ್ಶ ಮತ್ತು ಸ್ಫೂರ್ತಿಗಳಿಗಾಗಿ ವಿಶ್ವದ ಇತರ ದೇಶಗಳು ತನ್ನೆಡೆಗೆ ಮುಖಮಾಡಿ ನಿಲ್ಲುವಂತೆ ಮಾಡಿತೆಂಬುದು ಇತಿಹಾಸ ಬಲ್ಲ ಎಲ್ಲರಿಗೂ ಗೊತ್ತಿರುವ ದೇಶದ ಸಮಸ್ಯೆಗಳನ್ನು ನಿವಾರಿಸಲು ಕಂಕಣಬದ್ಧರಾಗೋಣ. ಸುವರ್ಣ ಸ್ವಾತಂತ್ರ್ಯೋತ್ಸವದ ಬಡತನ ಅನಕ್ಷರತೆ ಮಿತಿಮೀರಿ ಬೆಳೆಯುತ್ತಿರುವ ಜನಸಂಖ್ಯೆ ಇಂದು ನಮ್ಮ ಆಂತರಿಕ ಸಮಸ್ಯೆಗಳಾಗಿ ಕಾಡುತ್ತಿವೆ. ದೇಶಪ್ರೇಮ, ಸಹಿಷ್ಣುತೆ, ಜಾತ್ಯಾತೀತ ಮನೋಭಾವನೆಗಳನ್ನು ಮೈಗೂಡಿಸಿಕೊಂಡು ದೇಶದ ಸಮಸ್ಯೆಗಳನ್ನು ನಿವಾರಿಸಲು ಕಂಕಣಬದ್ಧರಾಗೋಣ. ಸುವರ್ಣ ಸ್ವಾತಂತ್ರ್ಯೋತ್ಸವದ ಆಚರಣೆ ಈ ದಿಸೆಯಲ್ಲಿ ಎಲ್ಲರಿಗೂ ಪ್ರೇರಣೆ ನೀಡಲಿ.

ನಾಡ ಜನತೆಗೆ ಸ್ವಾತಂತ್ರ್ಯೋತ್ಸವದ ಶುಭಾಶಯಗಳು

**ಜೆ. ಹೆಚ್. ಪಟೇಲ್**
ಮುಖ್ಯ ಮಂತ್ರಿಗಳು

**ಪ್ರಗತಿಯ ಪಕ್ಷಿನೋಟ :** ದೀರ್ಘಕಾಲದಿಂದ ಸಮಸ್ಯೆಯ ಕಗ್ಗಂಟಾಗಿದ್ದ ಕಾವೇರಿ ಜಲವಿವಾದಕ್ಕೆ ಸೌಹಾರ್ದಯುತ ಪರಿಹಾರ. ಇದು ಮಾನ್ಯ ಮುಖ್ಯಮಂತ್ರಿ ಶ್ರೀ ಜೆ. ಹೆಚ್. ಪಟೇಲ್ ಅವರ ದೂರದೃಷ್ಟಿ ಮತ್ತು ಧೀಮಂತ ನಾಯಕತ್ವದ ದ್ಯೋತಕ. ನೀರಾವರಿ : ನೀರಾವರಿಗೊಳಪಡಿಸಿದ ಪ್ರದೇಶ 1994-95, 25.10 ಲಕ್ಷ ಹೆಕ್ಟೇರುಗಳು, 26.77 ಲಕ್ಷ ಹೆಕ್ಟೇರುಗಳು ● ಕೃಷ್ಣಾ ಮೇಲ್ದಂಡೆ ಕಾಲುವೆಯೋಜನೆಯಡಿಲ್ಲಿ 300 ಕಿ.ಮೀ. ಉದ್ದದ ಕಾಲುವೆಯ ನಿರ್ಮಾಣ ಕಾರ್ಯಪೂರ್ಣ. ● ನೀರಾವರಿ ಯೋಜನೆಗಳಿಗಾಗಿ ಯೋಜನೇತರ ಶೀರ್ಷಿಕೆಯಡಿಯಲ್ಲಿ 1997-98ರಲ್ಲಿ 1937 ಕೋಟಿ ರೂ.ಗಳು. ಮೀಸಲು. ಕೃಷಿ ಇಲಾಖೆ 1992-93ರಲ್ಲಿ 84.98ಲಕ್ಷ ಟನ್ನುಗಳು ಆಹಾರ ಧಾನ್ಯದ ಉತ್ಪಾದನೆ. 1996-97ರಲ್ಲಿ 91.70 ಲಕ್ಷ ಟನ್ನುಗಳ ದಾಖಲೆ ಉತ್ಪಾದನೆ. **ಸಮಾಜ ಕಲ್ಯಾಣ :** ● 1997ರಲ್ಲಿ ಪರಿಶಿಷ್ಟ ಜಾತಿ ಪರಿಶಿಷ್ಟ ಪಂಗಡದವರಿಗಾಗಿ 40 ಮೊರಾರ್ಜಿ ದೇಸಾಯಿ ವಸತಿ ಶಾಲೆಗಳಿಗೆ ಮಂಜೂರಾತಿ ಹಾಗೂ 25 ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳಿಗೆ ಮಂಜೂರಾತಿ. ● ಹಿಂದುಳಿದ ವರ್ಗದ ವಿದ್ಯಾರ್ಥಿಗಳಿಗಾಗಿ ಕಳೆದ ವರ್ಷ 48 ಮತ್ತು ಈ ವರ್ಷ 50 ವಿದ್ಯಾರ್ಥಿನಿಲಯಗಳಿಗೆ ಮಂಜುರಾತಿ.● ಮಹಿಳೆಯರ ಮತ್ತು ಮಕ್ಕಳ ಕಲ್ಯಾಣಕ್ಕಾಗಿ ಅರುಣೋದಯ, ಉದ್ಯೋಗಿನಿ, ನವಚೇತನ, ಜಾಗೃತಿ, ನಮ್ಮ ಮಗಳು, ನಮ್ಮ ಶಕ್ತಿ ಮುಂತಾದ ಯೋಜನೆಗಳನ್ನು ಪ್ರಾರಂಭಿಸಲಾಗಿದೆ. ● ವೃತ್ತಿಪರ ಶಿಕ್ಷಣ ಪಡೆಯಲು ಹಿಂದಳಿದ ವರ್ಗದವರ ಮತ್ತು ಅಲ್ಪ ಸಂಖ್ಯಾತರಿಗಾಗಿ ಅರಿವು ಯೋಜನೆ.

**ಗ್ರಾಮೀಣಾಭಿವೃದ್ಧಿ :** ● ನಿರ್ಮಲ ಗ್ರಾಮ ಯೋಜನೆಯಡಿಯಲ್ಲಿ ಕಳೆದ 3 ವರ್ಷಗಳಲ್ಲಿ 360000 ಶೌಚಾಲಯಗಳ ನಿರ್ಮಾಣ. 1995-98ರ ಅವಧಿಯಲ್ಲಿ 406.69 ಕೋಟಿ ರೂ. ವೆಚ್ಚದಲ್ಲಿ ಗ್ರಾಮೀಣ ಪ್ರದೇಶದ ಜನರಿಗಾಗಿ ಉದ್ಯೋಗ ಸೃಷ್ಠಿ. ಆರೋಗ್ಯ : 1956-657ರಲ್ಲಿ ಆಸ್ಪತ್ರೆಗಳ ಸಂಖ್ಯೆ 97. 1996-97ರಲ್ಲಿ ಆಸ್ಪತ್ರೆಗಳ ಸಂಖ್ಯೆ 294 ಮತ್ತು 1097 ಚಿಕಿತ್ಸಾಲಯಗಳು. ● ರಾಯಚೂರಿನಲ್ಲಿ 29.25 ಕೋಟಿ ರೂ.ಗಳ ವೆಚ್ಚದಲ್ಲಿ ಸೂಪ್ ಸ್ಪೆಷಾಲಿಟಿ ಆಸ್ಪತ್ರೆಯೊಂದನ್ನು ರೂಪಿಸಲಾಗುತ್ತಿದೆ. ● 3 ವರ್ಷಗಳಲ್ಲಿ 232 ಸಮುದಾಯ ಆರೋಗ್ಯ ಕೇಂದ್ರಗಳ ಪ್ರಾರಂಭ ಮತ್ತು ಜರ್ಮನ್ ಯೋಜನೆಯ ನೆರವಿನಡಿಯಲ್ಲಿ 47 ಆಸ್ಪತ್ರೆಗಳ ಅಭಿವೃದ್ಧಿ. ವಸತಿ : ಇಂದಿರಾ ಆವಾಸ ಯೋಜನೆ, ಹಹ ಮಂಡಲಿ, ಅಂಬೇಡ್ಕರ್ ಯೋಜನೆ, ಕೊಳಚಿಪ್ರದೇಶ ನಿರ್ಮೂಲನಾ ಯೋಜನೆ ಮತ್ತು ಆಶ್ರಯ ಯೋಜನೆಯಡಿಯಲ್ಲಿ ಒಟ್ಟು 3.5 ಲಕ್ಷ ಮನೆಗಳನ್ನು ಕಟ್ಟಲಾಗಿದೆ .● 1998-99ರ ಅಂತ್ಯದವರೆಗೆ ಒಟ್ಟಾರೆ 5 ಲಕ್ಷ ಮನೆಗಳ ಪೂರ್ಣಗೊಳಿಸುವ ಗುರಿ. ಶಿಕ್ಷಣ : 1960 ರಲ್ಲಿ ರಾಜ್ಯದ ಸಾಕ್ಷರತಾ ಪ್ರಮಾಣ ಶೇ. 20 ಈಗ 56 ಶೇ. ತಲುಪಿದೆ. ಹೊಸದಾಗಿ 1456 ಪ್ರಾಥಮಿಕ ಶಾಲೆಗಳ ಪ್ರಾರಂಭ. 3024 ಕಿರಿಯ ಪ್ರಾಥಮಿಕ ಶಾಲೆಗಳನ್ನು ಹಿರಿಯ ಪ್ರಾಥಮಿಕ ಶಾಲೆಗಳಾಗಿ ಮಾರ್ಪಾಡು.● ಕಳೆದ 3 ವರ್ಷಗಳ ಅವಧಿಯಲ್ಲಿ 55825 ಪ್ರಾಥಮಿಕ ಶಿಕ್ಷಕರನ್ನು 5421 ಪ್ರಾಢಶಾಲಾ ಶಿಕ್ಷಕರ ನೇಮಕ. ● 204 ಖಾಸಗೀ ಸಂಸ್ಥೆಗಳು ಪ್ರೌಢ ಶಾಲೆಗಳನ್ನು ತೆರೆಯಲು ಅನುಮತಿ. ವಿದ್ಯುತ್ : 1994-95ರಲ್ಲಿ 16.519 ದಶಲಕ್ಷ ಯೂನಿಟ್‌ಗಳ ವಿದ್ಯುತ್ ಉತ್ಪಾದನೆ.● ಕದ್ರಾ ಮತ್ತು ಕೊಡಸಳ್ಳಿ ಜಲ ವಿದ್ಯುತ್ ಯೋಜನೆಗಳ ಮೊದಲ ಘಟ್ಟ ಪೂರ್ಣಗೊಂಡು ತಲಾ 50 ಮೆ.ವ್ಯಾ ವಿದ್ಯುತ್ ಉತ್ಪಾದನೆ ಪ್ರಾರಂಭ. ಕೈಗಾರಿಕೆ : ಪ್ರಸ್ತುತ ಸರ್ಕಾರದ ಅವಧಿಯಲ್ಲಿ ಅನೇಕ ಬಹುರಾಷ್ಟ್ರೀಯ ಕಂಪನಿಗಳು (ಟೋಯೋಟಾ, ವೋಲ್ವೋ ಇತ್ಯಾದಿ ) ಸ್ಥಾಪನೆ ಹಾಗೂ ದೇಶೀಯ ಟೆಲ್ಕೋ ಕಂಪನಿಯ ಪ್ರಾರಂಭ ಮತ್ತು ಅನೇಕಲ್ ಬಳಿ 525 ಕೋಟಿ ರೂ.ಗಳ ಬಂಡವಾಳ ಬಾರೀ ವಾಣಿಜ್ಯ ವಾಹನ ತಯಾರಿಕೆ ಘಟಕ ವೋಲ್ವೋ ಸ್ಥಾಪನೆ.

● ಇಲೆಕ್ಟ್ರಾನಿಕ್ಸ್ ಮತ್ತು ಕಂಪ್ಯೂಟರ್ ಕೈಗಾರಿಕೆಗಳ ಬೆಳವಣಿಗೆಗೆ ರಾಜ್ಯ ಸರ್ಕಾರದ ಅದ್ವಿತೆ ಮಾಹಿತಿ ತಂತ್ರ ಜ್ಞಾನ ಪಾರ್ಕ್‌ನ ಆರಂಭ. 2000 ಕೋಟಿ ರೂ.ಗಳ ವಾರ್ಷಿಕ ವಹಿವಾಟು. ● 3200 ಕೋಟಿ ರೂ. ಬಂಡವಾಳ ಜಂಟಿ ವಲಯದ ಜಿಂದಾಲ್ ವಿಜಯನಗರ ಉಕ್ಕು ಕಾರ್ಖಾನೆ. ಬಳ್ಳಾರಿ ಜಿಲ್ಲೆಯಲ್ಲಿ. ಮೂಲ ಸೌಕರ್ಯ ಅಭಿವೃದ್ಧಿ ಸಂಸ್ಥೆ : ● ಸರಕಾರ ಮೊಟ್ಟ ಮೊದಲ ಬಾರಿಗೆ ಮೂಲ ಸೌಕರ್ಯಗಳ ಅಭಿವೃದ್ಧಿಗಾಗಿ ಪ್ರತ್ಯೇಕ ಇಲಾಖೆಯೊಂದನ್ನು ಸ್ಥಾಪಿಸಿದೆ. ● 1992-93ರವರೆಗೆ ರಾಜ್ಯದಲ್ಲಿ 1,34,542 ಕಿ.ಮೀ. ಉದ್ದದ ರಸ್ತೆ ಜಾಲವಿದ್ದದೆ. 1997-98ರಲ್ಲಿ 1,39,210 ಕಿ.ಮೀ.ಗೆ ವಿಸ್ತರಣೆ. ಸೀ ಬರ್ಡ್ ಪ್ರಾಜೆಕ್ಟ್ : 1986ರಷ್ಟು ಪೂರ್ವದಲ್ಲಿಯೇ ಪ್ರಾರಂಭಿಸಿ ಕಳೆದ 12 ವರ್ಷಗಳಿಂದ ನನೆಗುದಿಗೆ ಬಿದ್ದಿದ್ದ ಕಾರವಾರ ಸೀ ಬರ್ಡ್ ಯೋಜನೆಗೆ ಮರುಜೀವ ಇದು ರಾಜ್ಯದ ಹಣಕಾಸು ವ್ಯವಸ್ಥೆಯಲ್ಲಿನ ಹೆಚ್ಚಳಕ್ಕೆ ಸಹಾಯಕ. ಮಾನ್ಯ ಮುಖ್ಯಮಂತ್ರಿಯವರ ಕ್ರಿಯಾಶೀಲತೆಗೆ ಸಂದ ಜಯ. ಸಾರಿಗೆ ಮತ್ತು ಸಂಪರ್ಕ : ಸಾರಿಗೆ ಸಂಸ್ಥೆಯನ್ನು ಮೂರು ಸ್ವಾಯುತ್ತ ವಿಭಾಗಗಳನ್ನಾಗಿ ವಿಂಗಡಣೆ ಮತ್ತು ಹೊಸದಾಗಿ 4000 ಬಸ್ಸುಗಳ ಖರೀದಿ. ರಾಜ್ಯದಲ್ಲಿ ಗ್ರಾಮೀಣ ಜನರ ಸರ್ವತೋಮುಖ ಅಭಿವೃದ್ಧಿಗಾಗಿ ಸರ್ಕಾರ ದೇಶದಲ್ಲೇ ಮೊಟ್ಟ ಮೊದಲ ಬಾರಿ ಪಂಚಾಯತರಾಜ ವ್ಯವಸ್ಥೆಯನ್ನು ಜಾರಿಗೊಳಿಸಿ, ಅಧಿಕಾರ ವಿಕೇಂದ್ರಿಕರಣ. ಆಡಳಿತವನ್ನು ಜನರಿಗೆ ಮತ್ತಷ್ಟು ಸಮೀಪಕ್ಕೊಯ್ಯಲು 7 ಹೊಸಜಿಲ್ಲೆಗಳ ಆರಂಭ. ರಾಜ್ಯದ ತೀರ ಹಿಂದುಳಿದ ಗ್ರಾಮಗಳನ್ನು ಮಾದರಿ ಗ್ರಾಮಗಳಾಗಿ ಅಭಿವೃದ್ಧಿಪಡಿಸಲು ಸ್ವಸ್ತಿ ಗ್ರಾಮ ಯೋಜನೆ. ಮುಂದಿನ ಎರಡು ವರ್ಷಗಳಲ್ಲಿ ರಾಜ್ಯದ ಎಲ್ಲಾ ಹಳ್ಳಿಗಳಿಗೆ 900 ಕೋಟಿ ರೂ. ವೆಚ್ಚದಲ್ಲಿ ಕುಡಿಯುವ ನೀರು ಪೂರೈಕೆ. ಆದ್ಯ ವಲಯಗಳಿಗೆ ಒತ್ತುಕೊಟ್ಟು ಗ್ರಾಮೀಣ ನೀರು ಸರಬರಾಜು, ವಸತಿ, ಶಿಕ್ಷಣ, ಸಂಕಲ್ಪ, ಜನತೆ ಸಾಮಾಜಿಕ ಆರ್ಥಿಕ ರಂಗಗಳಲ್ಲಿ ಪ್ರಗತಿಯ ಫಲ ಸವಿಯುಂತಾದಾಗಲೇ ನಮ್ಮ ಸ್ವಾತಂತ್ರ್ಯೋತ್ಸವ ಅರ್ಥಪೂರ್ಣ.

**ಸುಂದರ ಕನಸಿನ ಪ್ರೇರಣೆ ಮಹತ್ತರ ಸಾಧನೆಗೆ ಸಮರ್ಪಣೆ.**

Edited, Printed & Published by M.A.N. Prasad, On behalf of the Mysore Association, Mumbai. Tel.: 402 46 47
Printed at Aarati Art Printers, Fort, Mumbai-400 001. * 266 33 61 / 266 59 38